ಭಾರತದಲ್ಲಿ ಬಾಲ್ಯ

ಸಂಪ್ರದಾಯಗಳು, ಪ್ರವೃತ್ತಿಗಳು ಮತ್ತು ರೂಪಾಂತರಗಳು

ಸಂಪಾದಕರು: ಟಿ.ಎಸ್. ಸರಸ್ವತಿ, ಶೈಲಜಾ ಮೆನನ್ ಮತ್ತು ಅಂಕುರ್ ಮದನ್

ಬಾಲ್ಯ, ಸಂಸ್ಕೃತಿ ಮತ್ತು ಸಮಾಜ ವಿಜ್ಞಾನಗಳು

ನಾವು ಏನನ್ನು ಗಳಿಸಿದ್ದೇವೆ

ಮತ್ತು

ಏನನ್ನು ಕಳೆದುಕೊಳ್ಳುತ್ತಿರಬಹುದು

ನಂದಿತಾ ಚೌಧರಿ

> ಒಂದಕ್ಕೊಂದು ಹೊಂದಾಣಿಕೆಯಿಲ್ಲದಂತೆ ತೋರುವ ಈ ಎಲ್ಲಾ ಘಟನೆಗಳು ಏಕತಾನದ ಜಾಗತಿಕ ಸಾಂಕ್ರಾಮಿಕತೆಯ ಲಕ್ಷಣಗಳಾಗಿವೆ ಎಂದು ಹೇಳಬಹುದು. ಇದು ಯಾವುದೇ ನಿಖರವಾದ ಮಾನದಂಡಗಳನ್ನು ಹೊಂದಿಲ್ಲ, ಆದರೆ ಅದರ ನೆರಳು ಬೀಳುವಲ್ಲೆಲ್ಲಾ, ಅದು ಏಕವರ್ಣದ, ಏಕಸಂಸ್ಕೃತಿಯ ಮತ್ತು ಏಕರೂಪದ (ಒತ್ತು ನನ್ನದು) ಭೂದೃಶ್ಯವನ್ನು ಸೃಷ್ಟಿಸುತ್ತದೆ.
>
> - ಮೇವಾ ಮಾಂಟೆನೆಗ್ರೊ ಮತ್ತು ಟೆರ್ರಿ ಗ್ಲಾವಿನ್ (2015), ಇನ್ ಡಿಫೆನ್ಸ್ ಆಫ್ ಡಿಫರೆನ್ಸ್

ಪೀಠಿಕೆ: ಬಾಲ್ಯದ ಅಧ್ಯಯನ

ಬಾಲ್ಯದ ವೈಜ್ಞಾನಿಕ ಅಧ್ಯಯನದಲ್ಲಿ ನಮ್ಮ ನಿಲುವುಗಳು ಹೆಚ್ಚಾಗಿ ಪಶ್ಚಿಮದಿಂದ ಹೊರಹೊಮ್ಮುತ್ತಿರುವ ಸಂಶೋಧನೆ ಮತ್ತು ಸಿದ್ಧಾಂತ ಸಂರಚನೆಗಳನ್ನು ಆಧರಿಸಿವೆ. ಮಕ್ಕಳ ಅಭಿವೃದ್ಧಿಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ನಾವು ಈ ಹಿಂದೆ ಬಳಸಿದ ಬಹುತೇಕ ಪಠ್ಯಪುಸ್ತಕಗಳನ್ನು ಹೆಚ್ಚಾಗಿ ಅಲ್ಲಿಯೇ ಪ್ರಕಟಿಸಲಾಗಿದೆ. ಅನೇಕ ವಿದ್ವಾಂಸರು ಭಾರತದ ಸಮಾಜ ವಿಜ್ಞಾನಗಳಲ್ಲಿ ಸಾಮಾಜಿಕ ಸಂರಚನೆಯನ್ನೇ ಪ್ರಧಾನವಾಗಿಸಿ ಇತರ ಸಂಸ್ಕೃತಿಗಳನ್ನು ಮಾನವ ವಿಜ್ಞಾನಗಳ ಮೂಲಸಾರ ನಡವಳಿಯಿಂದ ದೂರಾಗಿಸಿದ್ದನ್ನು ಬಿಡಿಸಲು ಒಂದು ವಿಮೋಚನವಾದಿ ಮಾರ್ಗ ಬೇಕೆಂದು ವಾದಿಸಿದ್ದಾರೆ

(ಕುಮಾರ್, 2006; ಮಿಶ್ರಾ, ಅಕೋಜಮ್, ಮತ್ತು ಮಿಶ್ರಾ, 2009; ಮಿಶ್ರಾ ಮತ್ತು ಕುಮಾರ್, 2009). ಸಾಮಾಜಿಕ ಮಾನವಶಾಸ್ತ್ರವು ಸ್ವಾಗತಾರ್ಹ ವಿನಾಯಿತಿಯಾಗಿದ್ದರೂ, ಅಲ್ಲಿಯೂ ಸಮಸ್ಯೆಗಳಿವೆ (ಚರ್ಚೆಗಾಗಿ ಆರ್ಟ್ನರ್, 2006 ನೋಡಿ). ವ್ಯಕ್ತಿತ್ವವಾದ ಸಿದ್ಧಾಂತದಿಂದ ಪ್ರೇರಿತರಾಗಿ, ಸಂಸ್ಕೃತಿ ಮತ್ತು ಮಾನವನ ವ್ಯಕ್ತಿನಿಷ್ಠತೆಯು ಮನೋವಿಜ್ಞಾನ ಮತ್ತು ಸಂಬಂಧಿತ ಕ್ಷೇತ್ರಗಳಲ್ಲಿ ಕಡಿಮೆ ಗಮನವನ್ನು ಸೆಳೆದಿದೆ. ವೈಯಕ್ತಿಕ ಮತ್ತು ಸಾಮೂಹಿಕ, ವಾಸ್ತವ ಮತ್ತು ಆದರ್ಶ, ನಿಯಮ ಮತ್ತು ಅದಕ್ಕೆ ಅಪವಾದ, ಹಾಗೂ ಜಾಗತಿಕ ಮತ್ತು ಸ್ಥಳೀಯವಾದುದರ ನಡುವಿನ ಅರ್ಥಪೂರ್ಣ ನಿರ್ಣಯಗಳನ್ನು ಕಂಡುಹಿಡಿಯುವುದಕ್ಕಾಗಿ ಕೆಲವು ನಿರಂತರ ಹೋರಾಟಗಳಾಗಿವೆ. ವಸಾಹತುಶಾಹಿಯ ನಂತರದ ಕಾಲದಲ್ಲಿ ಅಭಿವೃದ್ಧಿ ಹೊಂದುತ್ತಿರುವ ದೇಶವಾಗಿ, ಸ್ವಯಂ-ವ್ಯಾಖ್ಯಾನವು ನಮಗೆ ಯಾವಾಗಲೂ ಸಮಸ್ಯೆಯಾಗಿದೆ. ಭಾರತದ ಇತಿಹಾಸದಲ್ಲಿ ನೋಡಿದಂತೆ ವಸಾಹತುಶಾಹಿ ಆಳ್ವಿಕೆಯಲ್ಲಿದ್ದ ಪಾಶ್ಚಾತ್ಯ ಸಿದ್ಧಾಂತಗಳ ಶೋಷಣೆ ಮತ್ತು ದಬ್ಬಾಳಿಕೆ ಇನ್ನೂ ಅನೇಕ ಕ್ಷೇತ್ರಗಳಲ್ಲಿ ಮುಂದುವರಿದಿದೆ ಮತ್ತು ಸಾಮಾಜಿಕ ಮನೋವಿಜ್ಞಾನದಂತಹ ಕ್ಷೇತ್ರದಲ್ಲಿ ಅಸ್ಮಿತೆಯನ್ನು ಅರ್ಥೈಸಿಕೊಳ್ಳುವ ವಿಧಾನವಾಗಿದೆ. (ಗುರು, 2009). ವಿಕಾಸ ಮನೋವಿಜ್ಞಾನವೂ ಈ ಪ್ರವೃತ್ತಿಗಳಿಗೆ ಹೊರತಾಗಿಲ್ಲ.

ವಿಕಾಸವನ್ನು ರೂಪಿಸುವ ವಿಭಿನ್ನ ಪ್ರಕ್ರಿಯೆಗಳನ್ನು ಕ್ರೋಢೀಕರಿಸುವ ಪ್ರಯತ್ನದಲ್ಲಿ, ಸಾಂಸ್ಕೃತಿಕ ಮನೋವಿಜ್ಞಾನದಲ್ಲಿನ ಇತ್ತೀಚಿನ ಪ್ರಗತಿಗಳು ವ್ಯಕ್ತಿಯನ್ನು ಸಂಸ್ಕೃತಿ ಮತ್ತು ವ್ಯಕ್ತಿತನದೊಂದಿಗೆ ಏಕೀಕರಿಸುವ ಪ್ರಯತ್ನಗಳನ್ನು ಯಶಸ್ವಿಯಾಗಿ ಮಾಡಿದ್ದು, ಇವೆರಡೂ ಒಂದಕ್ಕೊಂದು ನಿರ್ಣಾಯಕವೆಂದು ತಿಳಿಯಲಾಗಿದೆ. ಕೋಲ್ ಹೀಗೆ ವಾದಿಸುತ್ತಾರೆ: 'ಮೊದಲಿನಿಂದಲೂ, ವಿಕಾಸದ ಅಂಶಗಳು ಎಂದು ಕರೆಯಲ್ಪಡುವ ಜೈವಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾರಕಗಳ ನಡುವಿನ ವ್ಯವಹಾರದಿಂದ ಹೊರಹೊಮ್ಮುವ ಪ್ರಕ್ರಿಯೆಯಾಗಿದ್ದರೂ ವ್ಯವಹಾರಗಳ ನಿಖರವಾದ ಸ್ವರೂಪವು ಜೀವಿ ವಿಕಾಸ ಕ್ರಮದುದ್ದಕ್ಕೂ ಬದಲಾಗುತ್ತದೆ' (ಕೋಲ್, (2002, ಪು. 304). ಸಂಸ್ಕೃತಿಯು ವ್ಯಕ್ತಿತ್ವವನ್ನು ನಿರ್ಧರಿಸುವ ಏಕೈಕ ಅಂಶವಲ್ಲ ಅಥವಾ ಅದರ ಸರಳ ಗುಣಲಕ್ಷಣವಲ್ಲ; ಅರ್ಥ ನೀಡುವ ಪ್ರಕ್ರಿಯೆಯಾಗಿ ಸಂಸ್ಕೃತಿಯು ವ್ಯಕ್ತಿ ಮತ್ತು ಪರಿಸರದ ನಡುವೆ ಇರುತ್ತದೆ (ವಾಲ್ಸಿನರ್, 2007). ಆದ್ದರಿಂದ ಇದು ಮಾನವ ವಿದ್ಯಮಾನಗಳ ಯಾವುದೇ ವೈಜ್ಞಾನಿಕ ಅಧ್ಯಯನದಲ್ಲಿ ಪ್ರಮುಖ ಸ್ಥಾನವನ್ನು ಪಡೆಯಬೇಕು. ಆದ್ದರಿಂದಲೇ ಸಾಂಸ್ಕೃತಿಕ ಪ್ರಕ್ರಿಯೆಗಳು ಬಾಲ್ಯ ಅಧ್ಯಯನದ ಅವಿಭಾಜ್ಯ ಅಂಗವಾಗಿವೆ.

ಸಂಸ್ಕೃತಿ, ವ್ಯಕ್ತಿ ಮತ್ತು ವಿಕಾಸ

ಸಂಸ್ಕೃತಿಯು ಏಕಕಾಲದಲ್ಲಿ ವಸ್ತು ಮತ್ತು ಭಾವವಾಗಿದ್ದು ಭೌತಿಕವೂ ಪರಿಕಲ್ಪನಾತ್ಮಕವೂ ಆಗಿದೆ (ಬಾರ್ಟ್ಲೆಟ್, 1932). ನಾವು ವಾಸಿಸುವ ಪರಿಸರವನ್ನು ಪರಿವರ್ತಿಸುವ ಸಾಮರ್ಥ್ಯದೊಂದಿಗೆ ಸುಸಜ್ಜಿತವಾಗಿದ್ದು, ನಮ್ಮ ಆಲೋಚನೆಗಳು ಭೌತಿಕ ಅಭಿವ್ಯಕ್ತಿಗಳಾಗಿ ಪ್ರಕಟವಾಗುವ ನಮ್ಮ ಸಾಂದರ್ಭಿಕ ಪರಿಸ್ಥಿತಿಯನ್ನು ರೂಪಾಂತರಿಸುತ್ತವೆ. ಪ್ರಾರಂಭದಿಂದಲೂ ಅದು,

> ಮಾನವ ರೂಪದ ವಿಕಾಸವು ಹೆಚ್ಚು ಸಂಕೀರ್ಣ ರಚನೆಗಳ ಹೊರಹೊಮ್ಮುವಿಕೆಯ ಆನುವಂಶಿಕವಲ್ಲದ ಪ್ರಭಾವಗಳಿಗೆ ಸಂಬಂಧಿಸಿದ ಪ್ರಕ್ರಿಯೆಯಾಗಿದ್ದು, ಇದರಲ್ಲಿ ಪ್ರತಿ ಹೊಸ ಮಟ್ಟದ ಸಂಘಟನೆಯು ಹೊಸ ಸಂಬಂಧಿತ ಸಂದರ್ಭದೊಂದಿಗೆ, ಮತ್ತು ವ್ಯಕ್ತಿ ಮತ್ತು ಕನಿಷ್ಠ ಮತ್ತೊಬ್ಬ ಮಾನವ ವ್ಯಕ್ತಿಯ ನಡುವಿನ ಸಮನ್ವಯದ ಹೊಸ ರೂಪದೊಂದಿಗೆ ಸಂಬಂಧವನ್ನು ಹೊಂದಿದೆ. (ಕೋಲ್, 2002, ಪು. 316)

ಇವು ಸಂಸ್ಕೃತಿಯ ಗುಣಲಕ್ಷಣಗಳಾಗಿರುವುದರಿಂದ ಸಂಸ್ಕೃತಿಯನ್ನು ಸೃಷ್ಟಿಸುವ ಮಾನವ ಮನಸ್ಸಿನ ಸಾಮರ್ಥ್ಯವು ಮಾನವ ವಿಕಾಸದ ವಿಶಿಷ್ಟತೆಯಾಗಿದೆ. ಸಂಸ್ಕೃತಿಯಲ್ಲಿನ ವ್ಯತ್ಯಾಸಗಳು ಅನಿಯಂತ್ರಿತ ಅಥವಾ ಯಾದೃಚ್ಛಿಕವಾಗಿರುವುದಿಲ್ಲ; ಇವುಗಳು ತಲೆಮಾರಿನಿಂದ ತಲೆಮಾರಿಗೆ ಸಾಗುವ ಹೊಂದಾಣಿಕೆಯ ಪ್ರಕ್ರಿಯೆಗಳಾಗಿವೆ. ಸಮಯ, ಸ್ಥಳ ಮತ್ತು ವ್ಯಕ್ತಿಯ ಸೇರುವಿಕೆಯು ಒಂದು ನಿರ್ದಿಷ್ಟ ಸಂದರ್ಭದಲ್ಲಿ, ನಿರ್ದಿಷ್ಟ ಸಮಯದಲ್ಲಿ, ನಿರ್ದಿಷ್ಟ ವ್ಯಕ್ತಿಯನ್ನು ವ್ಯಾಖ್ಯಾನಿಸುವ ವಿಶಿಷ್ಟ ಸಂಯೋಜನೆಯಾಗಿದೆ. ಹಿಂದೂ ಸಿದ್ಧಾಂತದಲ್ಲಿ, ಈ ಅಂಶಗಳನ್ನು ದೇಶ (ಸಂದರ್ಭ), ಕಾಲ (ಸಮಯ) ಮತ್ತು ಪಾತ್ರ (ವ್ಯಕ್ತಿ) ಎಂದು ಗುರುತಿಸಲಾಗಿದೆ. ಈ ವಿವರಗಳು ಲಭ್ಯವಿದ್ದಾಗ ಮಾತ್ರ ನೀಡಿದ ಯಾವುದೇ ನಡೆವಳಿಕೆಯನ್ನು ಅರ್ಥಮಾಡಿಕೊಳ್ಳಬಹುದು ಅಥವಾ ಮೌಲ್ಯಮಾಪನ ಮಾಡಬಹುದು (ಸಿನ್ಹಾ, 2002). ಯಾವುದೇ ಮಾನವ ಮುಖಾಮುಖಿಯು ಸಮಯ ಮತ್ತು ಸಂದರ್ಭ ಎರಡನ್ನೂ ಒಳಗೊಂಡಿರಬೇಕು ಎಂಬ ಗುರುತಿಸುವಿಕೆಯೇ ಸಾಂಸ್ಕೃತಿಕ ಮಾನಸಿಕ ವಿಶ್ಲೇಷಣೆಗೆ ಪ್ರಮುಖವಾಗಿದೆ.

ಸಾಮೂಹಿಕ ಮಾದರಿಗಳು ಮತ್ತು ವೈಯಕ್ತಿಕ ಭಿನ್ನತೆಗಳು: ಅಂತಃ ಮತ್ತು ಅಂತರ್-ಸಾಂಸ್ಕೃತಿಕ ಭಿನ್ನತೆಯನ್ನು ಪರಿಶೀಲಿಸುವುದು

ಹಲವು ವರ್ಷಗಳಿಂದ ನಡೆಸಿದ ಫಲೀಕರಣ ಮತ್ತು ನಂತರದ ಘಟನೆಗಳ ಪರಿಶೀಲನೆಯು ಜೀವಿ ಮತ್ತು ಸನ್ನಿವೇಶದ ಸಂಕೀರ್ಣವಾದ ಸಹ-ಅಭಿವೃದ್ಧಿಯನ್ನು ಎತ್ತಿ ತೋರಿಸಿದೆ. ಉದಾಹರಣೆಗೆ, ಮೂಲಭೂತ ಜೈವಿಕ ಪ್ರಕ್ರಿಯೆಗಳು ಸಹ ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಸರದ ಪ್ರಭಾವದೊಡನೆ ಜನನದ ನಂತರ ಪರೋಕ್ಷವಾಗಿ ಸಂಭವಿಸುತ್ತವೆ (ಕೋಲ್, 2002). ಈ ಪ್ರಭಾವವು ಶಕ್ತಿಯುತ ಮತ್ತು ದ್ವಿಮುಖವಾಗಿದ್ದು, ಅದರ ಸಂದರ್ಭದಿಂದ ಜೀವಿಗಳ ಪ್ರತ್ಯೇಕತೆಯು ಅಸಾಧ್ಯವಾಗುತ್ತದೆ. ಬಾಲ್ಯವನ್ನು ಸಾಂಸ್ಕೃತಿಕ ವಿದ್ಯಮಾನವಾಗಿ ಅಧ್ಯಯನ ಮಾಡುವಾಗ, ಬಾಲ್ಯದ 'ಸಾರ್ವತ್ರಿಕ' ಕಲ್ಪನೆಗಳು ಮತ್ತು ಸಾಂಸ್ಕೃತಿಕವಾಗಿ ನೆಲೆಗೊಂಡಿರುವವುಗಳ ನಡುವೆ ಗಮನಹರಿಸಬೇಕಾದ ಹಲವಾರು ಸಮಸ್ಯೆಗಳಿದ್ದು, ಅಮೂರ್ತ ಮತ್ತು ಮೂರ್ತ ಚಿತ್ರಗಳ ನಡುವಿನ ಸಂಭಾಷಣೆಯ ಅಗತ್ಯವಿರುತ್ತದೆ (ಲ್ಯಾನ್ಸಿ, 2008). ವೈವಿಧ್ಯತೆಯು ಪ್ರಮುಖ ಅಂಶವಾದುದಾದರೆ, ಪ್ರಾಯಶಃ ಪ್ರಮಾಣಕ ಅಧ್ಯಯನಗಳು ಮಾನವ ಸ್ಥಿತಿಯ ಬಗ್ಗೆ ಇಂತಿಷ್ಟು ಪ್ರಕಾಶ ಚೆಲ್ಲಬಹುದು ಬಾಲ್ಯವನ್ನು ಉತ್ತಮವಾಗಿ ವಿವರಿಸುವುದು ಮಕ್ಕಳ ಸ್ಥಿತ್ಯ ಅನುಭವಗಳು[1].

---

[1] ಸ್ಥಿತ್ಯ ಅನುಭವ ಎಂದರೆ ಒಂದು ನಿರ್ದಿಷ್ಟ ಸಮಸ್ಯಾ ನಿವಾರಣಾ ಸನ್ನಿವೇಶದಲ್ಲಿ ಅಂತರಕ್ರಿಯೆಯಿಂದ ಹೊರಹೊಮ್ಮುವ ಇಂದ್ರಿಯಗಳ ಮೂಲಕ ಪಡೆಯುವ ದೈಹಿಕ ಅನುಭವ.

ಸಾಮೂಹಿಕ ಮಾದರಿಗಳ ರಾಜಕೀಯ ಮತ್ತು ವ್ಯಕ್ತಿಯ ಅನಂತ ವೈವಿಧ್ಯತೆಯನ್ನು ಪರಿಶೀಲಿಸುವಾಗ, ನಮ್ಮ ಇತ್ತೀಚಿನ ಆವಿಷ್ಕಾರಗಳು ಜನರ ಸಾಂಸ್ಕೃತಿಕ ಜೀವನ ಮತ್ತು ಅವರ ವರ್ಗೀಕರಣವನ್ನು ಪರೀಕ್ಷಿಸುವ ನಮ್ಮ ಸಿದ್ಧಾಂತ ಮತ್ತು ವಿಧಾನವನ್ನು ತಿಳಿಸಬೇಕು. ಸಾಮಾಜಿಕ ವಿಜ್ಞಾನಗಳ ಸಿದ್ಧಾಂತದಲ್ಲಿ ಮಾನವ ರೂಪಗಳು ಮತ್ತು ಕಾರ್ಯಗಳಲ್ಲಿನ ವೈವಿಧ್ಯತೆಯ ಕೇಂದ್ರೀಯತೆಯನ್ನು ಅಳವಡಿಸಿಕೊಳ್ಳುವುದು ಶಿಕ್ಷಣ ತಜ್ಞರ ನೈತಿಕ ಜವಾಬ್ದಾರಿಯಾಗಿದೆ. ಸಂಸ್ಕೃತಿಯ ರಚನೆಯು ಆಗಾಗ್ಗೆ ರಾಷ್ಟ್ರೀಯತೆಯೊಂದಿಗೆ ಸಂಯೋಜಿಸಲ್ಪಟ್ಟಿದೆ. ದೇಶದೊಳಗೆ, ನಾವು ಸೂಕ್ಷ್ಮವಾಗಿ ಅವಲೋಕಿಸಿದಂತೆ ಭಿನ್ನಾಭಿಪ್ರಾಯಗಳು ಹೊರಹೊಮ್ಮಲು ಪ್ರಾರಂಭಿಸುತ್ತವೆ. ಸಂಸ್ಕೃತಿಯನ್ನು ಸೈದ್ಧಾಂತಿಕ ಮತ್ತು ನಿರ್ಣಾಯಕ ಎಂದು ನೋಡುವ ಪ್ರವೃತ್ತಿ (ಆರ್ಟ್ನರ್, 2006) ಇಂತಹ ಪ್ರವೃತ್ತಿಗೆ ಕಾರಣವಾಗುವ ಮೂಲಕ ನಿರ್ದಿಷ್ಟ ಸಮುದಾಯದ ಜನರು ಸಾಮಾನ್ಯ ಜೀವನ ವಿಧಾನಗಳನ್ನು ಹೊಂದಿರುತ್ತಾರೆ ಎಂದು ಊಹಿಸಲಾಗಿದೆ. ಸಮುದಾಯದೊಳಗೆ ನಂಬಿಕೆಗಳನ್ನು ಹಂಚಿಕೊಂಡರೂ, ವೈವಿಧ್ಯತೆಯು ಸಹ ನಿರಾಕರಿಸುವಂಥದ್ದಲ್ಲ. ಮಕ್ಕಳನ್ನು ಬೆಳೆಸುವ ವಿಧಾನಗಳಲ್ಲಿ ಸಮಾನ ಅಂಶಗಳು ಕಂಡುಬಂದರೂ, ಜನಸಮುದಾಯದೊಳಗಿನ ವ್ಯತ್ಯಾಸವು ಹೆಚ್ಚು ಮತ್ತು ಈ ಹಿನ್ನೆಲೆಯಲ್ಲಿ ಜಾಗತಿಕ, ಸಾಮೂಹಿಕ ಮತ್ತು ಸ್ಥಳೀಯ ವಾಸ್ತವತೆಯ ನಡುವಿನ ಪ್ರಕ್ರಿಯೆಯನ್ನು ಗಣನೆಗೆ ತೆಗೆದುಕೊಳ್ಳಬೇಕಾಗಿದೆ.

ವೈವಿಧ್ಯತೆ ಮತ್ತು ಸಾಂಸ್ಕೃತಿಕ ಮಾದರಿಗಳನ್ನು ಚರ್ಚಿಸಲು ಮಕ್ಕಳ ಆರೈಕೆಯ ಬಗ್ಗೆ ಚೀನೀ ಸಮುದಾಯದ ಉದಾಹರಣೆಯನ್ನು ತೆಗೆದುಕೊಳ್ಳೋಣ. ನಿಕಟ ಕುಟುಂಬ ಸಂಬಂಧಗಳು ಮತ್ತು ರಕ್ತ ಸಂಬಂಧಿಕರ ಸಾಮೀಪ್ಯ ಚೀನೀ ಕುಟುಂಬ ಜೀವನದ ಸಾಮಾನ್ಯ ವೈಶಿಷ್ಟ್ಯವಾಗಿದೆ ಮತ್ತು ಮಕ್ಕಳನ್ನು ಬೆಳೆಸುವ ಸಾಂಪ್ರದಾಯಿಕ ವಿಧಾನಗಳಿಗೆ ಹೆಚ್ಚಿನ ಒತ್ತನ್ನು ಕೊಡಲಾಗಿದೆ. ಬರ್ನ್ ಸ್ಟೈನ್ (2009) ವರದಿ ಮಾಡಿರುವ ಪ್ರಕಾರ ಯುನೈಟೆಡ್ ಸ್ಟೇಟ್ಸ್ ನಲ್ಲಿ ವಾಸಿಸುವ ಚೀನೀ ದಂಪತಿಗಳು ತಮ್ಮ ಮಕ್ಕಳನ್ನು ತಾತ-ಅಜ್ಜಿಯರ ಆರೈಕೆಯಲ್ಲಿ ಬೆಳೆಯಲು ಮರಳಿ ಮನೆಗೆ (ಚೀನಾಕ್ಕೆ) ಕಳುಹಿಸಲು ಬಯಸುತ್ತಾರೆ. ತಾಯಂದಿರು ಹಣಕಾಸಿನ ಕಾರಣಗಳನ್ನು ಉಲ್ಲೇಖಿಸಿ ತಮ್ಮ ಆಯ್ಕೆಯನ್ನು ಸಮರ್ಥಿಸಿಕೊಳ್ಳುತ್ತಾರೆ ಆದರೆ ದೇಶಾಂತರ ಪಾಲನೆಯ ನಿರ್ಧಾರವು ಮಕ್ಕಳ ಆರೈಕೆಯಲ್ಲಿ ರಕ್ತ ಸಂಬಂಧಿಕರ ಬಗ್ಗೆ ಅವರು ಹೊಂದಿರುವ ವಿಶ್ವಾಸವನ್ನು ಆಧರಿಸಿದೆ. ಮಕ್ಕಳು ಹೆಚ್ಚು ಮೌಲ್ಯಯುತವಾದ ಅವರ ಚೀನೀ ರೀತಿಯಲ್ಲಿ ಬೆಳೆಯುತ್ತಾರೆ ಮತ್ತು ಮರಳಿ ಬಂದ ನಂತರ ಸ್ಥಳೀಯ (ಯುನೈಟೆಡ್ ಸ್ಟೇಟ್ಸ್) ಸಂಸ್ಕೃತಿಯನ್ನು ಕಲಿಯುತ್ತಾರೆ ಎಂದು ನಂಬಲಾಗಿದೆ. ಈ ಮಧ್ಯೆ, ಚೀನೀ ಸಮುದಾಯಗಳಲ್ಲಿಯೂ ಬದಲಾವಣೆಗಳಾಗುತ್ತಿವೆ. ಸಾಂಪ್ರದಾಯಿಕ ಮೌಲ್ಯಗಳಿಗಿಂತ (ಚೆನ್, ಸೆನ್, ಲಿ, ಮತ್ತು ಹೆ, 2005) ಹೆಚ್ಚಿನ ಸ್ವಾಯತ್ತತೆಗೆ ಆದ್ಯತೆ ನೀಡುತ್ತಿರುವ ಬದಲಾವಣೆ ಕಂಡುಬರುತ್ತಿದೆ. ಒಂದೇ ಮಗುವಿನ ನಿಯಮದಿಂದಾಗಿ ಜನಸಂಖ್ಯೆಯ ಮೇಲೆ ಸಾಮಾಜಿಕ ಮತ್ತು ಮಾನಸಿಕ ದೂರಗಾಮಿ ಪರಿಣಾಮಗಳನ್ನು ಬೀರಿದೆ ಮತ್ತು ಚೀನೀ ಕುಟುಂಬಗಳಲ್ಲಿ ಗಮನಾರ್ಹವಾದ ಪ್ರಾದೇಶಿಕ ವ್ಯತ್ಯಾಸಗಳು ಕಂಡುಬಂದಿವೆ (ಟಾಲ್ಹೆಲ್ಮ್ ಮತ್ತು ಇತರರು, 2014).

ಸಾಮಾಜಿಕ ಗುಂಪುಗಳು ಸಾಮಾನ್ಯವಾಗಿ ದೂರದಿಂದ ಏಕರೂಪವಾಗಿ ಕಾಣಿಸುತ್ತವೆ ಮತ್ತು ಸಂಸ್ಕೃತಿಯೊಳಗೆಯೇ ವ್ಯತ್ಯಾಸಗಳು ಸಾಮೂಹಿಕ ಮಾದರಿಗಳನ್ನು ತಡೆಯುವುದಿಲ್ಲ ಎಂದು ನೆನಪಿಟ್ಟುಕೊಳ್ಳುವುದು ಬಹಳ ಮುಖ್ಯ. ನಾವು ನಮ್ಮ ಅನನ್ಯತೆಯ ಕಾರಣಕ್ಕೆ ಒಂದಾಗಿದ್ದೇವೆ. ಆದರೆ ಗುರುತಿಸಬಹುದಾದ ಸಹಭಾಗೀ ಜೀವನ ವಿಧಾನಗಳೂ ಇವೆ. ಆದ್ದರಿಂದ ಬಾಲ್ಯದ ಸಾಂಸ್ಕೃತಿಕ ವಿದ್ಯಮಾನವನ್ನು ಅಧ್ಯಯನ ಮಾಡುವಾಗ, ಹಂಚಿಕೊಂಡಿರುವ ಆಶಯಗಳು ಮತ್ತು ವೈವಿಧ್ಯತೆ ಈ ಎರಡೂ ಅಂಶಗಳನ್ನು ನೆನಪಿಟ್ಟುಕೊಳ್ಳುವುದು ಅತ್ಯಗತ್ಯ.

ಬಾಲ್ಯದ ಅರ್ಥೈಸುವಿಕೆ: ನಾವು ಏನನ್ನು ಗಳಿಸಿದ್ದೇವೆ

ಬದುಕುಳಿಯುವಿಕೆ: ಫಲವತ್ತತೆ, ಆರೋಗ್ಯ, ಪೋಷಣೆ ಮತ್ತು ಪ್ರತಿರಕ್ಷಣೆ

ಫಲೀಕರಣದ ನಂತರ, ವಿಕಾಸ ಹೇಗಾಗುತ್ತದೆ ಎಂಬುದನ್ನು ನಾವು ಆವಿಷ್ಕರಿಸಿದ್ದೇವೆ. ಪ್ರಸವಪೂರ್ವ ಪರೀಕ್ಷೆಗಳು, ಪ್ರತಿರಕ್ಷಣೆ, ಔಷಧಶಾಸ್ತ್ರ ಮತ್ತು ಶಸ್ತ್ರಚಿಕಿತ್ಸೆಯಂತಹ ವೈದ್ಯಕೀಯ ಕ್ಷೇತ್ರದಲ್ಲಿನ ಪ್ರಗತಿಗಳು ಆರೋಗ್ಯ, ಯೋಗಕ್ಷೇಮ, ಅಂಗವೈಕಲ್ಯತೆಯ ಆರಂಭಿಕ ಪತ್ತೆ ಮತ್ತು ಬದುಕುಳಿಯುವಿಕೆಯ ಮೇಲೆ ಗಮನಾರ್ಹ ಪರಿಣಾಮವನ್ನು ಬೀರಿವೆ. ಗರ್ಭನಿರೋಧಕಗಳ ಬಗೆಗಿನ ಜ್ಞಾನದಿಂದ, ನಾವು ದೇಹದ ಮೇಲೆ ನಿಯಂತ್ರಣವನ್ನು ಪಡೆದುಕೊಂಡಿದ್ದೇವೆ ಮತ್ತು ನಮ್ಮ ಆಯ್ಕೆಗಳನ್ನು ವಿಸ್ತರಿಸಿದ್ದೇವೆ. ಮಹಿಳೆಯರ ಜೀವನ ಮತ್ತು ಕುಟುಂಬದ ಗತಿಶೀಲತೆ ಶಾಶ್ವತವಾಗಿ ಬದಲಾಗಿದೆ. ಹೆಚ್ಚಿನ ಮಹಿಳೆಯರು ತಾವು ಮಕ್ಕಳನ್ನು ಪಡೆಯುವ ಸಮಯವನ್ನು ಯೋಜಿಸಲು (ಯಾವಾಗಲೂ ಅವಕಾಶ ಅಥವಾ ಸ್ವಾತಂತ್ರ್ಯವಿಲ್ಲದಿದ್ದರೂ) ಮಾಹಿತಿಯನ್ನು ಹೊಂದಿದ್ದಾರೆ. ಜನಪದ ವಿಧಾನಗಳು ಸಹ ಅಸ್ತಿತ್ವದಲ್ಲಿವೆ ಮತ್ತು ಮಕ್ಕಳ ಜನನವನ್ನು ವಿಳಂಬಗೊಳಿಸುವ ವಿವಿಧ ವಿಧಾನಗಳನ್ನು - ಈ ಜ್ಞಾನವು ಸಾರ್ವತ್ರಿಕವಾಗಿಲ್ಲದಿದ್ದರೂ ಅಥವಾ ಯಾವುದೇ ನಿಖರತೆಯಿಲ್ಲದಿದ್ದರೂ - ಬಳಸಲು ಮಹಿಳೆಯರಿಗೆ ಅವಕಾಶವಿದೆ. ಪರಂಪರಾಗತ ಔಷಧದ ಜ್ಞಾನವನ್ನು ದಾಖಲೆಗಳಿಲ್ಲದಿದ್ದರೂ, ಪರಿಣಾಮಕಾರಿಯಾಗಿ ಒಂದು ಪೀಳಿಗೆಯಿಂದ ಮುಂದಿನ ಪೀಳಿಗೆಗೆ ಮೌಖಿಕವಾಗಿ ದಾಟಿಸಲಾಗಿದೆ (ಕುಮಾರ್, ತಿವಾರಿ, ಮತ್ತು ತಿವಾರಿ, 2006). ವೈದ್ಯಕೀಯ ಕಾರ್ಯಕ್ರಮಗಳ ಹರಡುವಿಕೆಯಿಂದಾಗಿ, ಜನರು ತಮ್ಮದೇ ಆದ ಆಯ್ಕೆಗಳನ್ನು ಮಾಡಲು ಸಾಧ್ಯವಾಗುತ್ತಿದೆ ಮತ್ತು ವಿಭಿನ್ನ ವಿಧಾನಗಳನ್ನು ಸಂಯೋಜಿಸುವ ಮೂಲಕ ವೈವಿಧ್ಯತೆಯನ್ನು ಕಂಡುಕೊಳ್ಳುತ್ತಿದ್ದಾರೆ. ಜನಸಂಖ್ಯಾ ಬದಲಾವಣೆಗಳು ಈ ಬೆಳವಣಿಗೆಗಳ ಪರಿಣಾಮವಾಗಿವೆ. ಉದಾಹರಣೆಗೆ, ಬಡವರಲ್ಲಿಯೂ ಸಹ ಪ್ರಪಂಚದಾದ್ಯಂತ ಜನನ ಪ್ರಮಾಣ ಕುಸಿತವಾಗಿದೆ. ಮಾನವರು ಹಿಂದೆಂದಿಗಿಂತಲೂ ಕಡಿಮೆ ಮಕ್ಕಳನ್ನು ಹೊಂದುತ್ತಿದ್ದು, ಆರ್ಥಿಕ ಪರಿಸ್ಥಿತಿಗಳು, ಶಿಕ್ಷಣ ಮತ್ತು ಆರೋಗ್ಯ ಸ್ಥಿತಿ ಸುಧಾರಿಸಿದಂತೆ ಈ ಪ್ರವೃತ್ತಿಯನ್ನು ಉಳಿಸಿಕೊಳ್ಳುವ ಸಾಧ್ಯತೆಯು ಕಂಡುಬರುತ್ತಿದೆ.

ಕಲಿಕೆ ಮತ್ತು ಶಿಕ್ಷಣ

ಮಕ್ಕಳ ಕಲಿಕೆ ಮತ್ತು ಮಕ್ಕಳು ವಯಸ್ಕರಿಗಿಂತ ಹೇಗೆ ಭಿನ್ನವಾಗಿ ಆಲೋಚಿಸುತ್ತಾರೆ ಎಂಬುದನ್ನು ಕುರಿತು ಬಹಳಷ್ಟು ಬರೆಯಲಾಗಿದೆ. ಆಲೋಚನೆಯಲ್ಲಿ ಆಗುವ ಬದಲಾವಣೆ ಕುರಿತ ಜ್ಞಾನಶಾಸ್ತ್ರದ ಬಗ್ಗೆ ನಮಗೆ ತಿಳಿದಿದೆ. ಪಿಯಾಜೆಯಂತಹ

ವಿಜ್ಞಾನಿಗಳ ವಿವರವಾದ ಆವಿಷ್ಕಾರಗಳು ಮತ್ತು ಸೈದ್ಧಾಂತಿಕ ಪ್ರತಿಪಾದನೆಗಳು ನಮಗೆ ಅದನ್ನು ತಿಳಿಸಿವೆ. ಇದು ಮಕ್ಕಳಿಗೆ ಕಲಿಯಲು ಬೆಳವಣಿಗೆಗೆ ಸೂಕ್ತವಾದ ವಿಧಾನಗಳನ್ನು ನಿರ್ಮಿಸಲು ಮತ್ತು ಆ ಮೂಲಕ ಶೈಕ್ಷಣಿಕ ಅನುಭವಗಳನ್ನು ಹೆಚ್ಚು ಅರ್ಥಪೂರ್ಣ ಮತ್ತು ಸ್ನೇಹಪರವಾಗಿಸಿದೆ. ಮಗುವೊಂದು ಭಾಷಾ ಕಲಿಕೆಯಲ್ಲಿ ಅಭೂತಪೂರ್ವ ಸಾಧನೆ ತೋರಿದರೂ, ಸರಳವಾದ ದೈಹಿಕ ಚಟುವಟಿಕೆಗಳನ್ನು ಮಾಡಲು ಅಸಮರ್ಥವಾಗಿದೆ ಎಂಬುದು ಮತ್ತೊಂದು ಪ್ರಮುಖ ಆವಿಷ್ಕಾರವಾಗಿದೆ. ಮಕ್ಕಳನ್ನು ಆರೈಕೆ ಮಾಡುವವರಿಗೆ ಇದು ದೀರ್ಘಕಾಲದಿಂದ ತಿಳಿದಿದ್ದರೂ, ವ್ಯವಸ್ಥಿತ ಸಂಶೋಧನೆಯಿಂದ ತಿಳಿದುಬಂದಿರುವ ಮಾಹಿತಿಯು ಮಕ್ಕಳ ಮನಸ್ಸನ್ನು ಇನ್ನಷ್ಟು ಮತ್ತಷ್ಟು ಆಳವಾಗಿ ನೋಡಲು, ಮತ್ತು ಅವಲೋಕನದಾಚೆಗೂ ಗಮನಿಸಲು ಸಹಾಯ ಮಾಡಿದೆ. ಮಕ್ಕಳು ಯಾವಾಗಲೂ ಹೀಗೆಯೇ ಇದ್ದರು ಎಂಬುದನ್ನು ನೆನಪಿಟ್ಟುಕೊಳ್ಳುವುದು ಬಹಳ ಮುಖ್ಯ; ಅವರು ಹೇಗೆ ಬೆಳವಣಿಗೆ ಹೊಂದುತ್ತಾರೆ ಎಂಬುದರ ಕುರಿತು ನಮ್ಮ ತಿಳಿವಳಿಕೆ ಹೆಚ್ಚಾಗಿದೆಯಷ್ಟೆ. ಇದೇ ರೀತಿಯಲ್ಲಿ ದೈಹಿಕ ಬೆಳವಣಿಗೆ, ಲೈಂಗಿಕ ಪಕ್ವತೆ, ಭಾವನೆಗಳು ಮತ್ತು ಸಾಮಾಜಿಕ ಸಂಬಂಧಗಳು ಹಾಗೂ ಬೆಳವಣಿಗೆಯ ವಿಳಂಬ ಮತ್ತು ಅಂಗವೈಕಲ್ಯದಂತಹ ಇತರ ವಲಯಗಳಲ್ಲಿ ಪ್ರಗತಿ ಸಾಧಿಸಲಾಗಿದೆ. ನಮಗೆ ಆನುವಂಶಿಕ ತೊಂದರೆಗಳು ಮತ್ತು ಪರಿಸರದಿಂದಾಗುವ ಅಪಾಯಗಳ ಬಗ್ಗೆ ಅರಿವಿದ್ದು, ಇವೆಲ್ಲವೂ ಮಕ್ಕಳ ಬೆಳವಣಿಗೆ ಮತ್ತು ಫಲಿತಾಂಶಗಳ ಬಗೆಗಿನ ನಮ್ಮ ಜ್ಞಾನವನ್ನು ಇನ್ನಷ್ಟು ವಿಸ್ತರಿಸಿವೆ.

ತಲೆ ತಲಾಂತರಗಳಿಂದ ಪೋಷಕರು ಮಕ್ಕಳಿಗೆ ಪ್ರಪಂಚದ ರೀತಿನೀತಿಗಳ ಬಗ್ಗೆ ಕಲಿಸಿದ್ದಾರೆ ಮತ್ತು ಪ್ರಸ್ತುತ ರೂಪದ ಶಾಲಾ ಶಿಕ್ಷಣವು ಇತ್ತೀಚೆಗೆ ಸೇರ್ಪಡೆಯಾದುದಾಗಿದೆ. ಕೈಗಾರಿಕಾ ಕ್ರಾಂತಿಯ ಸಮಯದಲ್ಲಿ ಕಾರ್ಖಾನೆಗಳಲ್ಲಿ ಕೆಲಸ ಮಾಡಲೋಸುಗ ವಯಸ್ಕರಿಗೆ ಮಕ್ಕಳ ಜವಾಬ್ದಾರಿಯಿಂದ ಬಿಡುಗಡೆಗೊಳಿಸಲು ಮತ್ತು ಮಕ್ಕಳನ್ನು ನೋಡಿಕೊಳ್ಳಲೋಸುಗ ಶಾಲೆಗಳನ್ನು ಮೊದಲು ಸ್ಥಾಪಿಸಲಾಯಿತು. ಅಲ್ಲದೆ, ಕಾರ್ಖಾನೆಗಳಿಗೆ ತರಬೇತಿ ಪಡೆದ ಕೆಲಸಗಾರರ ಅಗತ್ಯವಿತ್ತು. ಇದಕ್ಕಾಗಿ ಮಕ್ಕಳಿಗೆ ಶಿಸ್ತು ಮತ್ತು ಏಕರೂಪತೆಯನ್ನು ಕಲಿಸಲು ಶಾಲೆಗಳಿಗೆ ಸೇರಿಸಲಾಯಿತು. ವಾಸ್ತವವಾಗಿ, ಶಾಲೆಯು ಬೆಳೆಯುತ್ತಿರುವ ಮಕ್ಕಳ ಮೇಲೆ ಏಕರೂಪದ ಪ್ರಭಾವ ಬೀರಬೇಕಾಗಿತ್ತು. ಒಮ್ಮೆ ಶಾಲೆಯ ಕಲ್ಪನೆಯನ್ನು ಜಗತ್ತಿಗೆ ಪರಿಚಯಿಸಿದ ನಂತರ, ಶಾಲಾ ಶಿಕ್ಷಣದ ಪ್ರಭಾವದಿಂದ ಹಿಂದೆ ಸರಿಯುವುದಾಗಲಿ ಅಥವಾ ದೂರ ಸರಿಯುವುದಾಗಲಿ ಸಾಧ್ಯವಿಲ್ಲ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಶಾಲೆಗೆ ಹೋದ ಕಾರಣದಿಂದಾಗಿ ಅನೇಕ ತಲೆಮಾರುಗಳ ವಿದ್ಯಾರ್ಥಿಗಳು ಉತ್ತಮ ಜೀವನವನ್ನು ಹೊಂದಿದ್ದಾರೆ. ಅನೇಕ ದೇಶಗಳು ಮನೆಯಲ್ಲಿ ಮಕ್ಕಳಿಗೆ ಕಲಿಸಲು ಬಯಸುವ ಕುಟುಂಬಗಳ 'ಹೋಮ್-ಸ್ಕೂಲಿಂಗ್' (ಮನೆಯೇ ಶಾಲೆಯಾಗುವ) ಪದ್ಧತಿಯನ್ನು ನಿಷೇಧಿಸುತ್ತವೆ. ಆ ಮೂಲಕ ಎಲ್ಲಾ ಮಕ್ಕಳನ್ನು ಶಾಲೆಗೆ ಸೇರಿಸಲು ಒತ್ತಾಯಿಸುತ್ತಾರೆ. ಬಾಲ್ಯ ಮತ್ತು ಶಾಲೆ ಸಮಾನಾರ್ಥಕ ಪದಗಳಾದವು ಮತ್ತು ಕುಟುಂಬದೊಂದಿಗೆ ಶಾಲೆಯೂ ಮಕ್ಕಳ ಜೀವನದಲ್ಲಿ ಪ್ರಭಾವ ಬೀರುವ ಪ್ರಮುಖ ಸಂಸ್ಥೆಯಾಯಿತು.

ಶಾಲಾ ಶಿಕ್ಷಣದ ಇತಿಹಾಸ ಮತ್ತು ಅದರ ಬೆಳವಣಿಗೆಯು ವಿವಿಧ ದೇಶಗಳಲ್ಲಿ ವಿವಿಧ ರೀತಿಯಲ್ಲಿ ವ್ಯಕ್ತಪಡಿಸಲ್ಪಟ್ಟಿದೆ ಮತ್ತು ಇದು ಸಂಸ್ಕೃತಿಗಳಾದ್ಯಂತ ಮತ್ತು ಸಂಸ್ಕೃತಿಗಳೊಳಗೆ ಮಕ್ಕಳ ಶಾಲಾ ಅನುಭವದ ಮೇಲೆ ಪ್ರಭಾವ ಬೀರಿದೆ.

ಶಾಲೆಯ ಪ್ರಾಮುಖ್ಯತೆಯು ಹೆಚ್ಚುತ್ತಿರುವಂತೆ, ಆರಂಭಿಕ ಬಾಲ್ಯ ಶಿಕ್ಷಣವು ಪ್ರಮುಖ ವಿದ್ಯಮಾನಗಳಲ್ಲೊಂದಾಗಿ ಹೊರಹೊಮ್ಮಿದೆ. ಆಟದ ಸಾಮಗ್ರಿ ಮತ್ತು ಸಾಂದರ್ಭಿಕ ಆಟಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡ ಮಕ್ಕಳ ಕಲಿಕೆ ಕುರಿತ ಬಾಲ್ಯ ಶಿಕ್ಷಣವು ಸಿದ್ಧಾಂತಗಳಿಂದ ತುಂಬಿಹೋಗಿದೆ ಮಗುವಿನ ಬೆಳವಣಿಗೆಯ ಗುಣಲಕ್ಷಣಗಳಿಗೆ ಅನುಗುಣವಾಗಿ ಪ್ರಾಥಮಿಕ ಮಾದರಿಯು ಅನೌಪಚಾರಿಕವಾಗಿರಬೇಕಿತ್ತು. ಪೆರ್ರಿ ಪ್ರಿಸ್ಕೂಲ್ ಪ್ರಾಜೆಕ್ಟ್ ನ ಬೃಹತ್ ಯಶಸ್ಸು ಮತ್ತು ಯುನೈಟೆಡ್ ಸ್ಟೇಟ್ಸ್ ನಲ್ಲಿನ ಹೈ ಸ್ಕೋಪ್ ಫೌಂಡೇಶನ್ ಮತ್ತು ಹೆಡ್ ಸ್ಟಾರ್ಟ್ ಗಳು ಕಡಿಮೆ ಆದಾಯದ ಕುಟುಂಬಗಳಲ್ಲಿ ಕಲಿಕೆಯ ಆರಂಭಿಕ ಹಂತಗಳಿಗೆ ಒಡ್ಡಿಕೊಳ್ಳುವುದರಿಂದ ಉಂಟಾಗುವ ಪರಿಹಾರದ ಪರಿಣಾಮಗಳ ಮೇಲಿನ ನಂಬಿಕೆಗೆ ಹೆಚ್ಚುವರಿ ಪ್ರಚೋದನೆಯನ್ನು ನೀಡಿತು. ಆರಂಭಿಕ ದಾಖಲಾತಿಯು ಶಾಲಾ ಶಿಕ್ಷಣದ ವಿಷಯದಲ್ಲಿ ಧನಾತ್ಮಕ ಫಲಿತಾಂಶಗಳಿಗೆ ಕಾರಣವಾಗುತ್ತದೆ ಎಂದು ಪದೇ ಪದೇ ವಾದಿಸಲಾಗಿದೆ.

ನೈತಿಕತೆ ಮತ್ತು ಸಾರ್ವತ್ರಿಕ ಹಕ್ಕುಗಳು

ಮಕ್ಕಳ ಹಕ್ಕುಗಳ ಮೇಲಿನ ಒಡಂಬಡಿಕೆಯನ್ನು ವಿಶ್ವಸಂಸ್ಥೆಯ ಸಮಾವೇಶವು (ಯು ಎನ್ ಸಿ ಆರ್ ಸಿ) 1990 ರಲ್ಲಿ ಘೋಷಿಸಿತು. ಈ ನಿಬಂಧನೆಯ ಮೂಲಕ ಪ್ರಪಂಚದ ಎಲ್ಲಾ ಮಕ್ಕಳಿಗೆ ಶಾಂತಿ ಮತ್ತು ಘನತೆಯಿಂದ ಮುಕ್ತವಾಗಿ ಬದುಕುವ ಹಕ್ಕನ್ನು ನೀಡಲು ಒಪ್ಪಂದಕ್ಕೆ ಬರಲಾಯಿತು. ವಿವಿಧ ಸಾಂಸ್ಕೃತಿಕ ಹಿನ್ನೆಲೆಯ ಬಾಲ್ಯಗಳ ಭಿನ್ನತೆಗಳ ಸ್ವೀಕಾರವು ಸಮಾವೇಶದಲ್ಲಿ ಚರ್ಚಾಸ್ಪದ ವಿಷಯವಾಗಿ ಉಳಿದಿದೆ. ದಕ್ಷಿಣ ಏಷ್ಯಾದಲ್ಲಿ, ಕೆಲಸ ಮಾಡುವ ಮಕ್ಕಳು ಮತ್ತು ಬಾಲಕಾರ್ಮಿಕರನ್ನು ತೀವ್ರವಾದ ಮಕ್ಕಳ ಹಕ್ಕುಗಳ ಉಲ್ಲಂಘನೆಯ ವರ್ಗದಲ್ಲಿ ಇರಿಸುವುದು ಸಮಸ್ಯಾತ್ಮಕವಾಗಬಹುದು. ಏಕೆಂದರೆ ಈ ಮಕ್ಕಳು ಆಗಾಗ್ಗೆ ಮನೆಯಲ್ಲಿ ಅಥವಾ ಕೃಷಿ ಕೆಲಸಗಳಲ್ಲಿ ಸಹಾಯಕರಾಗಿ ಸೇವೆ ಸಲ್ಲಿಸುತ್ತಾರೆ. ಈ ಆಚರಣೆಗಳನ್ನು ನಿರ್ಲಕ್ಷ್ಯ ಅಥವಾ ನಿಂದನೆ ಎಂದು ತಳ್ಳಿಹಾಕಲು ಸಾಧ್ಯವಿಲ್ಲ (ಬೆಹೆರಾ, 2007). ಬಾಲ್ಯವನ್ನು ಸ್ವತಂತ್ರ, ಅವಲಂಬಿತ ಮತ್ತು ಪರಿಶೋಧನೆಯ ಅವಧಿಯನ್ನಾಗಿ ನೋಡಲಾಗುತ್ತಿದ್ದು, ಅದು ಜಾಗತಿಕವಾಗಿ ದಕ್ಷಿಣದಲ್ಲಿನ ಬಹುಪಾಲು ಮಕ್ಕಳೊಂದಿಗೆ ಹೊಂದಿಕೆಯಾಗದ ದೃಷ್ಟಿಕೋನವನ್ನು ಪ್ರತಿನಿಧಿಸುತ್ತದೆ. ಆದಾಗ್ಯೂ, ಶೋಷಣೆ ಮತ್ತು ದುರುಪಯೋಗದ ಗಂಭೀರ ಸಮಸ್ಯೆಗಳಿದ್ದು, ಅವುಗಳನ್ನು ಪರಿಹರಿಸಬೇಕಾಗಿದೆ ಮತ್ತು ಮಕ್ಕಳನ್ನು ಇವುಗಳಿಂದ ರಕ್ಷಿಸಬೇಕಾಗಿದೆ. ನಾವು ಈ ನಿಟ್ಟಿನಲ್ಲಿ ಸಾಕಷ್ಟು ದೂರ ಸಾಗಿ ಬಂದಿದ್ದೇವೆ.

ಭಾರತದಂತಹ ದೇಶದಲ್ಲಿ, ಸರ್ಕಾರದ ಬೆಂಬಲವು ಇನ್ನೂ ಸಾರ್ವತ್ರಿಕ ವ್ಯಾಪ್ತಿಯನ್ನು ಪಡೆಯಬೇಕಾಗಿದ್ದು, ಕುಟುಂಬವೇ ಮಕ್ಕಳ ಪ್ರಮುಖ ರಕ್ಷಕನಾಗಿದೆ. ತಮ್ಮ ಕುಟುಂಬದಿಂದ ಓಡಿಹೋಗಲು ಯತ್ನಿಸಿದ ಅಥವಾ ತ್ಯಜಿಸಲ್ಪಟ್ಟ ಮಕ್ಕಳಿಗೆ ಕೆಲವೇ ಕೆಲವು ಮುನ್ನೇರ್ಪಾಡುಗಳಿವೆ ಮತ್ತು ಲಭ್ಯವಿರುವವುಗಳು ಕೂಡ ಸಾಕಷ್ಟಿಲ್ಲ. ಬಹುಶಃ 'ಮುಕ್ತ ಮಾರುಕಟ್ಟೆ'ಯ ಪ್ರವೇಶದ ನಂತರ ಇದು ಇನ್ನಷ್ಟು ಉಲ್ಬಣಗೊಳ್ಳಬಹುದು (ಬೂ, 2014; ಮಾಂಡರ್, 2015). ಹೀಗಾಗಿ, ಮಗುವನ್ನು ಕುಟುಂಬದಿಂದ ಪ್ರತ್ಯೇಕವಾಗಿ ನೋಡುವುದು ಸಮರ್ಥನೀಯವಲ್ಲ. 'ಹೇಗೆ' ಮತ್ತು 'ಏನು' ಎಂಬ ಪರಿಕಲ್ಪನೆಯನ್ನು ಮಗುವಿನ 'ಉತ್ತಮ ಹಿತಾಸಕ್ತಿ' ಎಂದು ಪರಿಗಣಿಸಲಾಗಿದೆ ಮತ್ತು ಹೆಚ್ಚು ಸೂಕ್ಷ್ಮವಾದ ಮತ್ತು ಸಾಂದರ್ಭಿಕವಾಗಿ ಸಂವೇದಿಸುವ ವಿಮರ್ಶೆಯ ಅಗತ್ಯವಿದೆ (ಸರ್ಪೆಲ್ ಮತ್ತು ಸಮೆನೆಂಗ್, 2014).

ನಾವು ಏನನ್ನು ಕಳೆದುಕೊಳ್ಳುತ್ತಿರಬಹುದು

ಸಂಸ್ಕೃತಿಗಳ ನಡುವಿನ ಸಂಬಂಧಗಳು ರಾಜಕೀಯದಿಂದ ತುಂಬಿದ್ದು, ಅವು ಯಾವುದೇ ಒಂದು ಸಂದರ್ಭದಲ್ಲಿ ಬಾಲ್ಯದ ಅಧ್ಯಯನಕ್ಕೆ ಪ್ರವೇಶಿಸಬಹುದು. ಒಟ್ಟು 184 ರಾಷ್ಟ್ರಗಳಲ್ಲಿ ಸುಮಾರು 157 ರಾಷ್ಟ್ರಗಳು, ಆಫ್ರಿಕಾ, ಮಧ್ಯ ಮತ್ತು ಲ್ಯಾಟಿನ್ ಅಮೇರಿಕಾ ಮತ್ತು ಏಷ್ಯಾದ ಹೆಚ್ಚಿನ ರಾಷ್ಟ್ರಗಳನ್ನು ಒಳಗೊಂಡಿರುವ ದಕ್ಷಿಣ ಗೋಳಾರ್ಧವು ಸೀಮಿತ ಸಂಪನ್ಮೂಲಗಳು, ಆರ್ಥಿಕ ಕ್ರಾಂತಿ, ಬಡತನ ಮತ್ತು ಸಂಭವನೀಯ ರಾಜಕೀಯ ಅಸ್ಥಿರತೆಯನ್ನು ಹೊಂದಿರುವ ಪ್ರದೇಶಗಳಾಗಿ ಗುರುತಿಸಲ್ಪಟ್ಟಿವೆ. ಇವುಗಳಲ್ಲಿ ವಸಾಹತುಗಳಾಗಿದ್ದು ತಮ್ಮ ವಸಾಹತುಶಾಹಿ ಪ್ರಧಾನ ಕಛೇರಿಗಳಿಗೆ ಹೆಚ್ಚಿನ ಪ್ರಮಾಣದ ಸಂಪತ್ತನ್ನು ವರ್ಗಾಯಿಸಿದ ಪ್ರದೇಶಗಳೂ ಇವೆ. ಈ ಪ್ರದೇಶವು ಪ್ರಪಂಚದ ಶ್ರೀಮಂತ ಮತ್ತು ಆರೋಗ್ಯಕರ ಪ್ರದೇಶಗಳಾದ ಉತ್ತರ ಗೋಳಾರ್ಧದಲ್ಲಿರುವ 57 ದೇಶಗಳಿಗಿಂತ ಭಿನ್ನವಾಗಿದೆ. ಅಂತಾರಾಷ್ಟ್ರೀಯ ಸಂಬಂಧಗಳ ಅಸಮವಾದ ಭೂದೃಶ್ಯವು ಸಮಕಾಲೀನ ಜಗತ್ತಿನಲ್ಲಿ ಉತ್ತರ ಮತ್ತು ದಕ್ಷಿಣದ ನಡುವೆ ಒಂದೇ ದಿಕ್ಕಿನಲ್ಲಿ ಮುಂದುವರಿಯುತ್ತದೆ ಎಂಬುದು ಆಶ್ಚರ್ಯವೇ ಸರಿ. ಈ ಎರಡು ಪ್ರದೇಶಗಳ ನಡುವಿನ ಸ್ಪಷ್ಟ ವಿಭಜನೆಯು ಮಕ್ಕಳಲ್ಲಿ ವಿಭಿನ್ನ ಅನುಭವಗಳಾಗಿ ಕೂಡ ಮಾರ್ಪಡುತ್ತದೆ. ಈ ಭಿನ್ನತೆಗಳು ಒಂದು ಪ್ರದೇಶಕ್ಕೆ ಇಲ್ಲವೇ ಭಾರತದಷ್ಟು ವಿಶಾಲ ಗಾತ್ರದ ಆರ್ಥಿಕ, ಭೌಗೋಳಿಕ, ಪಾರಿಸಾರಿಕ, ಜನಾಂಗೀಯ ಮತ್ತು ಭಾಷಾ ವೈವಿಧ್ಯತೆ ಇರುವ ಒಂದು ನಿರ್ದಿಷ್ಟ ರಾಷ್ಟ್ರಕ್ಕೆ ಸೀಮಿತವಾಗಿರಬಹುದು. ಭಾರತದ ವಿವಿಧ ಭಾಗಗಳಲ್ಲಿ ಜನರು ವಿಭಿನ್ನವಾಗಿ ಕಾಣುವುದು ಮಾತ್ರವಲ್ಲ, ಆಹಾರ, ಸಂಪ್ರದಾಯಗಳು, ಉಡುಗೆ ಮತ್ತು ಇತರ ಆಚರಣೆಗಳು ಕೂಡಾ ತುಂಬಾ ವೈವಿಧ್ಯಮಯವಾಗಿವೆ. ಇದರೊಂದಿಗೆ, ಭಾರತದಲ್ಲಿನ ಬುಡಕಟ್ಟು ಗುಂಪುಗಳು ಪ್ರತಿಯೊಂದೂ ವಿಭಿನ್ನ ನಂಬಿಕೆಗಳು ಮತ್ತು ಆಚರಣೆಗಳೊಂದಿಗೆ, ಮತ್ತೊಂದು ಸಮೂಹವನ್ನು ರೂಪಿಸುತ್ತವೆ.

ನಾವು ಮಾನವೀಯತೆ, ರಾಷ್ಟ್ರೀಯತೆ ಅಥವಾ ಜನಾಂಗೀಯತೆಯನ್ನು ಕುರಿತು ಮಾತನಾಡುತ್ತಿರಲಿ, ಸಾಂಸ್ಕೃತಿಕ ಪ್ರಕ್ರಿಯೆಗಳನ್ನು ಚರ್ಚಿಸುವಾಗ ಜನರ ನಡುವೆ ಮತ್ತು ಜನರ ಮಧ್ಯೆ ರಾಜಕೀಯ ಮೀಮಾಂಸೆಗಳು ಯಾವಾಗಲೂ ಇದ್ದೇ ಇರುತ್ತವೆ. ಆಗ ಹಲವಾರು ಪ್ರಮುಖ ಪ್ರಶ್ನೆಗಳು ಉದ್ಭವಿಸುತ್ತವೆ. ಜಾಗತಿಕವಾಗಿ ನಾವು ಸಾಂಸ್ಕೃತಿಕ ವೈವಿಧ್ಯತೆಯನ್ನು ಹೇಗೆ ಗುರುತಿಸುತ್ತೇವೆ? ಎಲ್ಲಾ ಸಾಂಸ್ಕೃತಿಕ ಆಚರಣೆಗಳು ಮಕ್ಕಳಿಗೆ ಅನುಕೂಲಕರವಾಗಿವೆಯೇ? ಶಿಶುಪಾಲನಾ ಆಚರಣೆಗಳಿಗೆ ಸಂಬಂಧಿಸಿದಂತೆ ಸರಿಪಡಿಸಬೇಕಾದ ಯಾವುದಾದರೂ ಸಂಸ್ಕೃತಿಗಳಿವೆಯೇ? ಮಕ್ಕಳನ್ನು ಹೇಗೆ ಅರ್ಥಮಾಡಿಕೊಳ್ಳಬೇಕು ಎಂಬ ವೈಜ್ಞಾನಿಕ ಸಂಶೋಧನೆಗಳಿಗೆ ಸಂಬಂಧಿಸದಿದ್ದರೂ ಸಮುದಾಯಗಳು ತಮ್ಮ ನಂಬಿಕೆಗಳು ಮತ್ತು ಆಚರಣೆಗಳಿಗೆ ಅರ್ಹವಾಗಿವೆಯೇ?

ಈ ಪ್ರಶ್ನೆಗಳಿಗೆ ಉತ್ತರಿಸಲು ನಾನು ಯಾವುದೇ ಪ್ರಯತ್ನವನ್ನು ಮಾಡುವುದಿಲ್ಲ. ಏಕೆಂದರೆ ಇವುಗಳಿಗೆ ಯಾವುದೇ ಸುಲಭವಾದ ಉತ್ತರಗಳಿಲ್ಲ ಎಂಬುದು ನನ್ನ ನಂಬಿಕೆ. ಬದಲಾಗಿ, ಭಾರತೀಯ ಕುಟುಂಬಗಳಲ್ಲಿ ಕಂಡುಬರುವ ಮಕ್ಕಳ ಆರೈಕೆಯ ಮೌಲ್ಯಯುತವಾಗಿರುವ ಮತ್ತು ಆಗಾಗ್ಗೆ ಎದುರಾಗುವ ಆಯ್ದ ಮಾದರಿಗಳಿಗೆ ನಾನು ಉತ್ತರಿಸುತ್ತೇನೆ. ವಿಶೇಷವಾಗಿ ಮಕ್ಕಳ ವಿಕಾಸ ಮತ್ತು ಆರೈಕೆಯು ಪಠ್ಯಪುಸ್ತಕ ಆವೃತ್ತಿಗಿಂತ ಭಿನ್ನವಾಗಿರುವ ಕಾರಣ ನಾನು ಇವುಗಳನ್ನು

ಚಿತ್ರಣಗಳಾಗಿ ಆಯ್ಕೆ ಮಾಡಿದ್ದೇನೆ. ಈ ವೈಶಿಷ್ಟ್ಯಗಳು ಜನಾಂಗೀಯ ಮತ್ತು ಪ್ರಾದೇಶಿಕ ವ್ಯತ್ಯಾಸಗಳನ್ನು ಮೀರಿವೆ ಮತ್ತು ಸಂಶೋಧನಾ ಅಧ್ಯಯನಗಳು ತೋರಿಸಿದಂತೆ ಧರ್ಮ, ಪ್ರದೇಶ, ಜನಾಂಗೀಯತೆ ಮತ್ತು ವರ್ಗದಾದ್ಯಂತ ಅದನ್ನು ಮೀರುವ ಸಾಂಸ್ಕೃತಿಕ ಜೀವನದ ಹಂಚಿಕೆಯ ಸಿದ್ಧಾಂತದ ಭಾಗವಾಗಿವೆ. ಈ ನಂಬಿಕೆಗಳನ್ನು ಹಂಚಿಕೊಳ್ಳಲಾದರೂ, ಇದು ಏಕರೂಪತೆಯನ್ನು ಸೂಚಿಸುವುದಿಲ್ಲ. ಏಕೆಂದರೆ ಶಿಕ್ಷಣ, ಆದಾಯ, ಉದ್ಯೋಗ, ಆಹಾರ, ಉಡುಗೆ, ವಿವಾಹ ಪದ್ಧತಿಗಳು ಮತ್ತು ಮಾತನಾಡುವ ಭಾಷೆಗಳಂತಹ ಇತರ ಆಯಾಮಗಳಲ್ಲಿ ಗುಂಪುಗಳು ತುಂಬಾ ಭಿನ್ನವಾಗಿರಬಹುದು. ಕುತೂಹಲಕಾರಿಯಾದುದೆಂದರೆ, ಮಧ್ಯ ಏಷ್ಯಾ, ಆಗ್ನೇಯ ಏಷ್ಯಾ, ದಕ್ಷಿಣ ಮತ್ತು ಮಧ್ಯ ಅಮೆರಿಕ, ಉಪ-ಸಹಾರನ್ ಆಫ್ರಿಕಾ ಮತ್ತು ಪೂರ್ವ-ಕೈಗಾರಿಕಾ ಯುರೋಪಿನ ಇತರ ಸಮುದಾಯಗಳಲ್ಲಿ ಬಹು ಆರೈಕೆ, ಒಡಹುಟ್ಟಿದವರ ಆರೈಕೆ ಮತ್ತು ಕೆಲಸದಲ್ಲಿ ಮಕ್ಕಳ ಭಾಗವಹಿಸುವಿಕೆ ವ್ಯಾಪಕವಾಗಿ ಕಾಣಿಸುತ್ತದೆ (ಕೆಲ್ಲರ್, 2013; ಲ್ಯಾನ್ಸಿ, 2008, ವೈಸ್ನರ್, 2014). ವಿಭಿನ್ನ ಸಂಸ್ಕೃತಿಗಳ ಸಂಶೋಧನೆಗಳನ್ನು ಅಧ್ಯಯನ ಮಾಡುವಾಗ ವಾಸ್ತವವಾಗಿ, ಈ ಆಚರಣೆಗಳು ಅಪವಾದಕ್ಕಿಂತ ಹೆಚ್ಚಾಗಿ ಕುಟುಂಬ ಜೀವನದ ರೂಢಿಯಾಗಿರಬಹುದು ಮತ್ತು ಕನಿಷ್ಠ ನಾವು ಇಡೀ ಪ್ರಪಂಚವನ್ನು ನಮ್ಮ ಜನಸಂಖ್ಯೆಯಾಗಿ ತೆಗೆದುಕೊಂಡರೆ ಪಠ್ಯಪುಸ್ತಕ ಪ್ರಕರಣಗಳು ಇವುಗಳಿಂದ ಹೊರಗಿರಬಹುದು.

ಬಹುಜನರ ಆರೈಕೆ

ಭಾರತದಲ್ಲಿನ ಕುಟುಂಬಗಳು ತಮ್ಮ ಮಕ್ಕಳನ್ನು ಕುಟುಂಬದ ಇತರ ಸದಸ್ಯರೂ ಮಕ್ಕಳ ಜೀವನದಲ್ಲಿ ಪ್ರಮುಖ ಸ್ಥಾನವನ್ನು ಹೊಂದಿದ್ದಾರೆ ಎಂಬ ಕಲ್ಪನೆಯೊಂದಿಗೆ ಬೆಳೆಸುತ್ತಾರೆ. ಈ ಕಾರಣದಿಂದಾಗಿ, ಮಗುವು ಅನೇಕ ಜನರ, ಮಕ್ಕಳು ಮತ್ತು ವಯಸ್ಕರಿಬ್ಬರ ಗಮನವನ್ನು ಪಡೆಯುತ್ತದೆ. ಆದಾಗ್ಯೂ, ತಾಯಿಯ ಪ್ರೀತಿಯನ್ನು ವಿಶೇಷವೆಂದು ಕಾಣಲಾಗಿದೆ (ಅದಕ್ಕೆ ಒಂದು ವಿಶೇಷ ಪದವಿದೆ: ಮಮತೆ), ಆದರೆ ಆಕೆಯ ಪ್ರಾಮುಖ್ಯತೆಯು ಇತರರು, ವಿಶೇಷವಾಗಿ ಕುಟುಂಬದ ಸದಸ್ಯರು ಹೊಂದಿರುವ ಸ್ಥಾನವನ್ನು ತಡೆಯುವುದಿಲ್ಲ. ಬಹುತೇಕ ಕುಟುಂಬ ವ್ಯವಸ್ಥೆಗಳಲ್ಲಿ, ತಾಯಂದಿರು ಶಿಶುಗಳ ಆರೈಕೆಯ ಜೊತೆಗೆ ಯಾವಾಗಲೂ ಇನ್ನಿತರ ಕೆಲಸಗಳಲ್ಲಿ ನಿರತರಾಗಿರುತ್ತಾರೆ. ಬಹು-ತಲೆಮಾರುಗಳಿರುವ ಮನೆಗಳು ಸಾಮಾನ್ಯವಾಗಿವೆ (ಹೆಸರಾದ ಅವಿಭಕ್ತ ಕುಟುಂಬ ಮತ್ತು ಅದರ ರೂಪಾಂತರಗಳು). ತಾಯಿ ಆಗಾಗ್ಗೆ ತನ್ನ ಮಗುವಿನ/ಮಕ್ಕಳ ಆರೈಕೆ ಮಾಡಲು ಇತರರನ್ನು ಅವಲಂಬಿಸಿರುತ್ತಾಳೆ. ಸರಸ್ವತಿ ಮತ್ತು ಪೈ ಅವರು ಇದನ್ನು (1997), ಇತರ ಕೆಲಸಗಳೊಂದಿಗೆ ಶಿಶು ಆರೈಕೆ ಮಾಡುವುದನ್ನು ಸಹವರ್ತಿ ಆರೈಕೆ ಎಂದು ಕರೆದಿದ್ದಾರೆ. ಮಕ್ಕಳು ಕೇವಲ ತಮ್ಮ ಸ್ವಂತ ಪೋಷಕರೊಂದಿಗೆ ಮಾತ್ರ ಒಡನಾಡುತ್ತಾ ಬೆಳೆಯುವುದು ಬಹು ಅಪರೂಪ. ಏಕೆಂದರೆ ವಿಭಕ್ತ ಕುಟುಂಬಗಳಲ್ಲಿಯೂ ಕೂಡಾ, ವಯಸ್ಕರು ಸಾಮಾನ್ಯವಾಗಿ ತಮ್ಮ ಮಕ್ಕಳ ಆರೈಕೆಯನ್ನು ಮಾಡಲು 'ಇತರರನ್ನು' ಹುಡುಕುತ್ತಾರೆ ಮತ್ತು ಪ್ರೋತ್ಸಾಹಿಸುತ್ತಾರೆ. ಇಂತಹ ವಿನಿಮಯಗಳ ಪುರಾವೆಗಳು ಬಹಳ ಸಾಮಾನ್ಯವಾಗಿದ್ದು ಇದು ಹಂಚಿಕೊಂಡ ಮತ್ತು ಬಹು ತಾಯಂದಿರ ಆರೈಕೆಯ ಹಳೆಯ ಸಂಪ್ರದಾಯವಾಗಿದೆ. ದಕ್ಷಿಣ ಭಾರತದ ತಮಿಳುನಾಡಿನಲ್ಲಿ ಮಹಿಳೆಯರು ಮಕ್ಕಳನ್ನು ಹಂಚಿಕೊಳ್ಳುವುದು ಪ್ರಾಚೀನ ಪದ್ಧತಿಯಾಗಿದ್ದು ಸುಮಾರು ಎರಡು ಸಹಸ್ರಮಾನಗಳ ಹಿಂದೆಯೇ ತಮಿಳು ಸಂಗಮ್ ಕಾವ್ಯದಲ್ಲಿ ಈ ಬಗ್ಗೆ ಬರೆಯಲಾಗಿದೆ (ಟ್ರಾವಿಕ್, 1990, ಪು. 155).

ಬಹು ಆರೈಕೆಯ ಕಾರಣದಿಂದಾಗಿ, ಮಗುವು ಹಲವಾರು ಜನರಿಂದ, ಪುರುಷರು ಮತ್ತು ಮಹಿಳೆಯರಿಂದ ಮತ್ತು ಇತರ ಮಕ್ಕಳಿಂದ ಗಮನ ಮತ್ತು ಆರೈಕೆಯನ್ನು ಪಡೆಯುವುದಕ್ಕೆ ಒಗ್ಗಿಕೊಂಡಿದೆ. ಇವರು ಸಂಬಂಧಿಕರು, ನೆರೆಹೊರೆಯವರು, ಸಹಾಯಕರು ಅಥವಾ ಅಪರಿಚಿತರೂ ಆಗಿರಬಹುದು. ಜನ ಬೇರೆಯವರ ಮಕ್ಕಳೊಂದಿಗೆ ಮಾತನಾಡಲು, ಎತ್ತಿಕೊಂಡು ಮುದ್ದಾಡಲು ಸಹಜವಾಗಿ ಬಯಸುತ್ತಾರೆ. ಸಾಮಾನ್ಯವಾಗಿ ಮಕ್ಕಳು ಬೆಳೆಯುವ ವಾಸಸ್ಥಳಗಳು ಬಹು ಮಕ್ಕಳು ಮತ್ತು ವಯಸ್ಕರನ್ನು ಹೊಂದಿರುವ ಸಾಧ್ಯತೆಯಿದೆ. ಒಂದೇ ವಯಸ್ಕ, ಒಂದೇ ಮಗು, ಅನೇಕ ವಯಸ್ಕರು ಮತ್ತು ಅನೇಕ ಮಕ್ಕಳೊಂದಿಗೆ ನಾವು 2X2 ಕೋಷ್ಟಕದ ಆರೈಕೆಯ ರೀತಿಗಳನ್ನು ಜೋಡಣೆ ಮಾಡಿಕೊಂಡಾಗ, ಈ ಕೆಳಗಿನ ಮಾದರಿಯನ್ನು ಪಡೆಯಬಹುದು (ಕೋಷ್ಟಕ 4.1) (ಚೌಧರಿ, 2003).

ಎಲ್ಲಾ ನಾಲ್ಕು ಸಾಧ್ಯತೆಗಳಲ್ಲಿ, ಅನೇಕ ವಯಸ್ಕರು, ಅನೇಕ ಮಕ್ಕಳ ಮಾದರಿಯ ಒಂದು ಅಧ್ಯಯನದಲ್ಲಿ, 58 ಕುಟುಂಬಗಳಲ್ಲಿ 26ರಲ್ಲಿ ಹೆಚ್ಚಾಗಿ ಕಂಡುಬಂದಿದೆ, ಮತ್ತು ಕೇವಲ ಏಳು ಮಕ್ಕಳು ಪ್ರಧಾನವಾಗಿ ಒಬ್ಬ ವಯಸ್ಕರ ಜೊತೆಗೆ ಬೆಳೆದಿದ್ದಾರೆ. ಆದರೂ, ಅಲ್ಲಿಯೂ ಸಹ, ದಿನವೂ ಅನೇಕ ಜನರು ಹೋಗಿ ಬಂದು ಮಾಡಿದ್ದಾರೆ (ಚೌಧರಿ, 2013, 2015). ಈ ಮಾದರಿಯ ಪರಿಣಾಮಕಾರಿತ್ವವನ್ನು ದೃಢೀಕರಿಸಲು ಹೆಚ್ಚಿನ ಸಂಶೋಧನೆಗಳನ್ನು ನಡೆಸಬೇಕಾಗಿದೆ. ಆದರೆ ಭಾರತದ ವಿವಿಧ ಭಾಗಗಳಲ್ಲಿನ ಕುಟುಂಬಗಳ ಜನಾಂಗಶಾಸ್ತ್ರ ಮತ್ತು ಅವಲೋಕನಗಳ ಮೂಲಕ ಪುನರಾವರ್ತಿತವಾಗಿ ದೃಢೀಕರಿಸಲ್ಪಟ್ಟ ಬಹು-ಪಾಲನಾ ಮಾದರಿಯು ಮೌಲ್ಯಯುತವಾಗಿದೆ (ಚೌಧರಿ, 2004; ಕರ್ಟ್ಜ್, 1992, ನಿಕ್ಸರ್ ಮತ್ತು ನಿಕ್ಸರ್, 1887; ರೋಲ್ಯಾಂಡ್, 2005; ಸೆಮೌರ್, 1999; ಶರ್ಮಾ, 2003; ಟ್ರಾವಿಕ್, 1990).

ಕೋಷ್ಟಕ 4.1 ಆರೈಕೆ ವ್ಯವಸ್ಥೆಯಲ್ಲಿನ ನಾಲ್ಕು ಸಾಧ್ಯತೆಗಳು

ಆರೈಕೆಯ ಸನ್ನಿವೇಶ	ಒಂದೇ ಮಗು	ಅನೇಕ ಮಕ್ಕಳು
ಏಕ ವಯಸ್ಕ ಅನೇಕ ವಯಸ್ಕರು	ಏಕ ವಯಸ್ಕ ಏಕ ಮಗು ಏಕ ವಯಸ್ಕ ಅನೇಕ ಮಕ್ಕಳು	ಅನೇಕ ವಯಸ್ಕರು ಒಂದೇ ಮಗು ಅನೇಕ ವಯಸ್ಕರು ಅನೇಕ ಮಕ್ಕಳು

ಮೂಲ: ಚೌಧರಿ (2013, ಪು. 172).

ಬಹುಜನರ ಆರೈಕೆಯ ಸರ್ವತ್ರ ಬಳಕೆ ಮಕ್ಕಳಿಗೆ ಯಾವುದೇ ಪ್ರಯೋಜನಗಳನ್ನು ಸೂಚಿಸುತ್ತದೆಯೇ? ರಾಷ್ಟ್ರದ, ವಿಶೇಷವಾಗಿ ಚಿಕ್ಕ ಮಕ್ಕಳಿಗೆ ಬೆಂಬಲ ನೀಡುವ ಸಂಘಟಿತ ಸಹಾಯದ ಅನುಪಸ್ಥಿತಿಯಲ್ಲಿ, ಮತ್ತು ತಾಯಂದಿರು ಮನೆಗಳ ಹೊರಗೆ, ಹೊಲಗಳಲ್ಲಿ ಅಥವಾ ಕಾರ್ಖಾನೆಗಳು, ಕಚೇರಿಗಳು ಅಥವಾ ಶಾಲೆಗಳಲ್ಲಿ ಕೆಲಸ ಮಾಡುತ್ತಿದ್ದರೆ, ಅಂತಹ ಬೆಂಬಲವು ಮಕ್ಕಳಿಗೆ ನಿರ್ಣಾಯಕವಾಗಿರುತ್ತದೆ. ಅದರೊಂದಿಗೆ, ಹಲವಾರು (ಸ್ಥಿರವಾದ) ಆರೈಕೆದಾರರಿಂದ ಆರೈಕೆ ಪಡೆಯುವುದು ಹೆಚ್ಚಿನ ಹೊಂದಾಣಿಕೆಗೆ ಅನುಕೂಲಕರವಾಗಿರುತ್ತದೆ. ಹೇಗೆಂದರೆ ವಿಭಿನ್ನ ಬೇಡಿಕೆಗಳಿಗೆ ಹೊಂದಿಕೊಳ್ಳುವುದು ಹೇಗೆ ಮತ್ತು ಜನರೊಂದಿಗೆ ಬೆರೆಯುವುದು ಹೇಗೆ ಎಂಬುದನ್ನು ಮಗು ಆರಂಭದಲ್ಲಿಯೇ ಕಲಿಯುತ್ತದೆ. ಪರ್ಯಾಯಗಳಿರುವ ಈ ಆರಂಭಿಕ ಸಾಮಾಜೀಕರಣವು ಭಾರತೀಯ ಅನನ್ಯತೆಯ (ಕಾಕರ್ ಮತ್ತು

ಕಾಕರ್, 2007) ಮತ್ತು ಕುಟುಂಬವಾದದ (ರೋಲ್ಯಾಂಡ್, 2005) ಪ್ರಮುಖ ಲಕ್ಷಣವಾಗಿ ಉಳಿದಿದೆ. ಇದು ಬಾಲ್ಯದ ಜಾಗತಿಕ ಮಕ್ಕಳ ಕೇಂದ್ರಿತ ದೃಷ್ಟಿಕೋನಕ್ಕೆ ಹೊಂದಿಕೆಯಾಗದ ಕಾರಣ ಅದನ್ನು ಸಂರಕ್ಷಿಸದಿದ್ದರೆ ನಾವು ಕಳೆದುಕೊಳ್ಳುವ ಪ್ರಕ್ರಿಯೆಯಲ್ಲಿರಬಹುದು.

ಭಾರತೀಯ ಕುಟುಂಬಗಳಲ್ಲಿ, ಸಾಮಾನ್ಯವಾಗಿ ಮಕ್ಕಳನ್ನು ವಯಸ್ಕರಿಂದ ಪ್ರತ್ಯೇಕವಾಗಿಡುವುದಿಲ್ಲ. ಜೊತೆಯಾಗಿಯೇ ಜಾಗಗಳನ್ನು ಹಂಚಿಕೊಳ್ಳಲಾಗುತ್ತದೆ ಮತ್ತು ಮಕ್ಕಳನ್ನು ಎಲ್ಲಾ ಕಡೆ ಮತ್ತು ದಿನದ ಎಲ್ಲಾ ಸಮಯದಲ್ಲೂ ನೋಡಬಹುದು. ಹಾಗೆಯೇ ಚಿತ್ರಮಂದಿರದಲ್ಲಾಗಲಿ, ಸಾಮಾಜಿಕ ಕೂಟದಲ್ಲಾಗಲಿ ಮಕ್ಕಳನ್ನು ದೊಡ್ಡವರಿಂದ ಪ್ರತ್ಯೇಕಿಸುವುದೂ ಇಲ್ಲ. ಈ ಅಡೆತಡೆಯಿಲ್ಲದ ಹಂಚಿಕೊಳ್ಳುವ ಆರೈಕೆಯ ಸ್ವರೂಪವು, ವಿಶೇಷವಾಗಿ ಮಿಶ್ರ ವಯಸ್ಸಿನವರು ಇರುವಲ್ಲಿ, ವಾಸ್ತವವಾಗಿ ಮಗುವಿಗೆ ಇತರರೊಂದಿಗೆ ವ್ಯವಹರಿಸಲು ವ್ಯಾಪಕವಾದ ಕೌಶಲ ಮತ್ತು ಅನುಭವಗಳನ್ನು ಒದಗಿಸುತ್ತದೆ. ಇದು ರಕ್ಷಣಾತ್ಮಕ ಅಂಶವಾಗಿರದ್ದರೂ ಕೂಡ ಮಕ್ಕಳಿಗೆ ವಿಸ್ತಾರವಾದ ಮೇಲ್ವಿಚಾರಣೆ ಮತ್ತು ನಿರಂತರ ಜೊತೆಯನ್ನು ಒದಗಿಸುತ್ತದೆ. ಮಕ್ಕಳು ಒಂಟಿಯಾಗಿರುವುದು ಅಪರೂಪ. ಯಾವಾಗಲೂ ಇತರ ಮಕ್ಕಳು ಮತ್ತು ವಯಸ್ಕರೊಂದಿಗೆ ಇರುವುದರಿಂದ ಬಹುಶಃ ಒಂಟಿ ವಯಸ್ಕರಿಂದ ಏಕಾಂತ ಸ್ಥಳಗಳಲ್ಲಿ ಶೋಷಣೆಗೆ ಒಳಗಾಗುವ ಸಾಧ್ಯತೆ ಕಡಿಮೆಯಿರುತ್ತದೆ. ಅಲ್ಲದೆ ನೇರವಾಗಿ ಒಬ್ಬರ ಮೇಲೊಬ್ಬರು ನಡೆಸುವ ದಬಾದುಬಿಯ ಸಂಭಾವ್ಯತೆಯು ಇತರರ ಇರುವು ಮತ್ತು ಇಚ್ಛಾಪೂರ್ವಕ ಭಾಗವಹಿಸುವಿಕೆಯಿಂದ ನಿಯಂತ್ರಣಗೊಳ್ಳುತ್ತದೆ. ಹಾಗಿದ್ದರೂ ಮಕ್ಕಳ ಮೇಲಿನ ಹಿಂಸೆ ಮತ್ತು ಲೈಂಗಿಕ ದೌರ್ಜನ್ಯದ ಘಟನೆಗಳು ನಡೆಯುವುದರಿಂದ ಈ ಪ್ರತಿಪಾದನೆಗೆ ಮಿತಿಗಳಿವೆ. ಇದು ನಿಜವಾಗಿಯೂ ರಕ್ಷಣಾತ್ಮಕ ಅಂಶವಾಗಿದೆಯೇ ಎಂಬುದನ್ನು ಖಚಿತಪಡಿಸಲು ಬಹು ಆರೈಕೆಯ ಸನ್ನಿವೇಶಗಳು ಮತ್ತು ಮಕ್ಕಳ ದುರುಪಯೋಗದ ನಡುವಿನ ಸಂಬಂಧವನ್ನು ದೃಢೀಕರಿಸಲು ಹೆಚ್ಚಿನ ಸಂಶೋಧನೆಯ ಅಗತ್ಯವಿದೆ.

ಮಕ್ಕಳಿಂದ ಮಕ್ಕಳ ಆರೈಕೆ

ಮಗುವಿನ ಜೀವನದಲ್ಲಿ ಒಡಹುಟ್ಟಿದವರ ಪಾತ್ರವು ಬಹಳ ಅಮೂಲ್ಯವಾದುದಾಗಿದೆ (ವೈಸ್ನರ್ ಮತ್ತು ಗ್ಯಾಲಿಮೋರ್, 1997) ಮತ್ತು ಆರೈಕೆ ಮಾಡುವುದು ಅಥವಾ ಆರೈಕೆ ಮಾಡಿಸಿಕೊಳ್ಳುವುದು ಎರಡೂ ಮಗುವಿಗೆ ಬೇರೆಲ್ಲೂ ಸಿಗದ ಅನುಭವಗಳನ್ನು ಒದಗಿಸುತ್ತದೆ. ಒಡಹುಟ್ಟಿದವರ ಆರೈಕೆಯು ಪಾಶ್ಚಿಮಾತ್ಯೇತರ ಸಮಾಜಗಳಲ್ಲಿ ವ್ಯಾಪಕವಾಗಿದೆ ಮತ್ತು ಶತಮಾನಗಳಿಂದ ಕುಟುಂಬ ಜೀವನದ ನಿರಂತರ ಲಕ್ಷಣವಾಗಿದೆ. ಒಡಹುಟ್ಟಿದವರ ನಡುವಿನ ಪ್ರೀತಿಯ, ಜೀವಮಾನದ ಬಂಧಗಳ ಉದಾಹರಣೆಗಳು ಸಾಹಿತ್ಯದಲ್ಲಿ ವಿಪುಲವಾಗಿವೆ. ಇದು ಪ್ರತಿ ಮಗುವಿನ 'ವೈಯಕ್ತಿಕ' ಹಕ್ಕು ಎಂಬ ಉದಯೋನ್ಮುಖ ಸಿದ್ಧಾಂತದೊಂದಿಗೆ ಹೊಂದಿಕೆಯಾಗದ ಕುಟುಂಬ ಜೀವನದ ಒಂದು ವೈಶಿಷ್ಟ್ಯವಾಗಿರಬಹುದು. ಲ್ಯಾನ್ಸಿ

(೨೦೦೮) ಪ್ರಕಾರ, ಕೈಗಾರಿಕೇತರ ಸಮಾಜಗಳಲ್ಲಿ 'ಅಲೋಮದರಿಂಗ್'[2] (ತಾಯಿಯಲ್ಲದವರಿಂದ ಆರೈಕೆ) ಆರೈಕೆ ಜನಪ್ರಿಯವಾಗಿದೆ. ಅಲ್ಲಿ ಹಿರಿಯ ಒಡಹುಟ್ಟಿದವರು (ವಿಶೇಷವಾಗಿ ಹೆಣ್ಣು ಮಗು) ಕುಟುಂಬದ ಚಿಕ್ಕ ಮಕ್ಕಳು ಮತ್ತು ಶಿಶುಗಳ ಆರೈಕೆಯನ್ನು ನಿಯಮಿತವಾಗಿ ಮಾಡುತ್ತಾರೆ. ಒಡಹುಟ್ಟಿದವರ ಆರೈಕೆಯು ಪೋಷಕರಿಬ್ಬರಿಗೂ ಅನುಕೂಲ ಒದಗಿಸುತ್ತದೆ ಎಂದು ತಿಳಿದುಬಂದಿದೆ; ಆದರೂ ಇದು ಶಾಲಾ ಶಿಕ್ಷಣಕ್ಕೆ ಅಡ್ಡಿಯುಂಟು ಮಾಡುವುದು ದುರದೃಷ್ಟಕರ. ಹಿರಿಯ ಒಡಹುಟ್ಟಿದವರು ಕಿರಿಯರ ಆರೈಕೆ ಮಾಡಲು ಬೆಲೆ ತೆರಬೇಕಾಗುತ್ತದೆ, ಇದು ಹಿರಿಯ ಮಕ್ಕಳನ್ನು ಶಾಲೆಯಿಂದ ಹೊರಗಿಡಬಹುದು. ಆದಾಗ್ಯೂ, ಹೆಚ್ಚು ಅನುಕೂಲಕರವಾದ ದೃಷ್ಟಿಯಿಂದ ಒಡಹುಟ್ಟಿದವರ ಆರೈಕೆಯನ್ನು ನೋಡಲು ಸಾಧ್ಯವಿಲ್ಲವೇ? ವಿಭಿನ್ನ ಸಂಸ್ಕೃತಿಗಳಲ್ಲಿ ಒಡಹುಟ್ಟಿದವರ ಆರೈಕೆಯು ಸರ್ವತ್ರವಾಗಿರುವುದರಿಂದ, ಇತರ ಮಕ್ಕಳ ಸಹವಾಸದಲ್ಲಿ ಮೌಲ್ಯಯುತವಾದುದು ಏನಾದರೂ ಇರಲೇಬೇಕು ಆದ್ದರಿಂದ, ಸಾಂಸ್ಕೃತಿಕವಾಗಿ ಮೌಲ್ಯಯುತವಾದ ಆಚರಣೆಗಳನ್ನು ಅಳವಡಿಸಿಕೊಳ್ಳಲು ನಮ್ಮ ಶಾಲೆಯ ಕಲ್ಪನೆಗಳಲ್ಲಿ ಬದಲಾವಣೆಗಳನ್ನು ತರಲು ನಮಗೆ ಸಾಧ್ಯವೇ? ವಿಶೇಷವಾಗಿ, ಹಿರಿಯರು ಕೆಲಸಕ್ಕಾಗಿ ಮನೆಯಿಂದ ಹೊರಗಿರುವ ಸ್ಥಳಗಳಲ್ಲಿ ಮತ್ತು ಇತರ ಕುಟುಂಬ ಸದಸ್ಯರು ಮಕ್ಕಳನ್ನು ನೋಡಿಕೊಳ್ಳಲು ಲಭ್ಯವಿರದ ಸ್ಥಳಗಳ ಶಾಲೆಯಲ್ಲಿ ಮಿಶ್ರ-ವಯಸ್ಸಿನ ಮಕ್ಕಳ ಗುಂಪುಗಳ ಶಾಲೆಗಳನ್ನು ತೆರೆಯಲು ಅನುಮತಿಸುವುದು ಮತ್ತು ಹಿರಿಯ ತರಗತಿಗಳ ಜೊತೆಯಲ್ಲಿ ಆರಂಭಿಕ ಕಲಿಕಾ ಕೇಂದ್ರಗಳನ್ನು ತೆರೆಯುವುದು ಒಂದು ತಂತ್ರವಾಗಿದೆ. ಈ ರೀತಿಯಾಗಿ, ಒಡಹುಟ್ಟಿದವರ ಆರೈಕೆಯ ಪ್ರಯೋಜನಗಳನ್ನು ಸಂರಕ್ಷಿಸುವುದರೊಂದಿಗೆ ಶಾಲಾ ಶಿಕ್ಷಣದಲ್ಲಿ ಅವರ ಭಾಗವಹಿಸುವಿಕೆಯನ್ನು ಸುಗಮಗೊಳಿಸಬಹುದು.

ಮಗುವಿನ ರಕ್ಷಣೆ ಮತ್ತು ಅತಿಯಾದ ರಕ್ಷಣೆ

1966ರಲ್ಲಿ, ಮಾರಿಯಾ ಮಾಂಟೆಸ್ಸರಿ ಹೀಗೆ ಬರೆದಿದ್ದಾರೆ:

> ಆದರೆ ನವಜಾತ ಶಿಶುವಿನ ಆರೈಕೆಯು ಅದನ್ನು ಸಾವಿನಿಂದ ರಕ್ಷಿಸಲು, ಸೋಂಕಿನಿಂದ ಪ್ರತ್ಯೇಕಿಸಲು ಸೀಮಿತವಾಗಬಾರದು. ತಮ್ಮ ಉಸಿರಾಟದಿಂದ ಸೂಕ್ಷ್ಮಜೀವಿಗಳು ಮಕ್ಕಳನ್ನು ತಲುಪಬಾರದು ಎಂದು, ಇಂದು ಹೆಚ್ಚು ಆಧುನಿಕ ಚಿಕಿತ್ಸಾಲಯಗಳಲ್ಲಿ ಮಕ್ಕಳ ಆರೈಕೆಯನ್ನು ಮಾಡುವ ದಾದಿಯರು ತಮ್ಮ ಮುಖವನ್ನು ಬ್ಯಾಂಡೇಜಿನಿಂದ ಮುಚ್ಚಿಕೊಳ್ಳುತ್ತಾರೆ. ಮಗು ಹುಟ್ಟಿದ ಕ್ಷಣದಿಂದ ಮತ್ತು ಜಗತ್ತಿಗೆ ಅದರ ಹೊಂದಾಣಿಕೆಯನ್ನು ಸುಲಭಗೊಳಿಸುವ ಮಾನಸಿಕ ಆರೈಕೆಯ ಕ್ರಮಗಳಿಗೆ ಸಂಬಂಧಿಸಿದ ಸಮಸ್ಯೆಗಳಿವೆ. ಈ ನಿಟ್ಟಿನಲ್ಲಿ, ಕ್ಲಿನಿಕ್‌ಗಳಲ್ಲಿ ಇನ್ನೂ ಪ್ರಯೋಗಗಳನ್ನು ಮಾಡಬೇಕಾಗಿದೆ ಮತ್ತು ನವಜಾತ ಶಿಶುಗಳ ಬಗೆಗಿನ ಮನೋಭಾವವನ್ನು ಬದಲಾಯಿಸಲು ಕುಟುಂಬಗಳಲ್ಲಿ ಪ್ರಚಾರ ಮಾಡುವ ಅಗತ್ಯವಿದೆ.
>
> (ಮಾಂಟೆಸ್ಸರಿ, 1966/2013, ಪು. 19)

---

[2] ಅಲೋಮದರಿಂಗ್ ಎಂದರೆ ಜೈವಿಕ ಮಾತೆಯನ್ನು ಬಿಟ್ಟು ಗುಂಪಿನ ಇತರ ಸದಸ್ಯರಿಂದ ಶಿಶುವಿನ ಆರೈಕೆ ನಡೆಯುವುದು, ಕೆಲವೊಮ್ಮೆ ಅವರು ಮಗುವಿಗೆ ಮೊಲೆಯೂಡುತ್ತಾರೆ ಕೂಡ. ಇಂತಹ ಶಿಶುಪಾಲನಾ ಪದ್ಧತಿ ಸಾರ್ವತ್ರಿಕವಾಗಿದ್ದರೂ ಯಾರು ಇದನ್ನು ಮಾಡುತ್ತಾರೆ ಎನ್ನುವುದು ವಿಭಿನ್ನ ಸಂಸ್ಕೃತಿಗಳಲ್ಲಿ ವಿಭಿನ್ನವಾಗಿರುತ್ತದೆ. ಸಾಧಾರಣವಾಗಿ ಅಜ್ಜಿಯರು, ಕುಟುಂಬದ ಇತರ ಸದಸ್ಯರು ಇದನ್ನು ಮಾಡುತ್ತಾರೆ.

ಮಾಂಟೆಸ್ಸರಿಯ ಮಾತು ಇಂದಿಗೂ ಅನ್ವಯವಾಗುವಂತಿದೆ. ಮಕ್ಕಳ ಮೇಲಿಡುವ ನಿಕಟ ಕಣ್ಣಾವಲು ಮತ್ತು ರಕ್ಷಣೆಯು ಅವರ ಬದುಕುಳಿಯುವಿಕೆಯನ್ನು ಖಾತರಿಪಡಿಸಿದೆ. ಆದರೆ ಸುರಕ್ಷತೆಯು ಅತಿಯಾದ ರಕ್ಷಣೆಯಾಗುವ ಸಂದರ್ಭಗಳಿವೆಯೇ? 'ಹೆಲಿಕಾಪ್ಟರ್ ಪೇರೆಂಟಿಂಗ್'[3] ಅಥವಾ 'ಅತಿ ಕಾಳಜಿ ವಹಿಸುವ ಪೋಷಕರು' ಎಂಬ ವಿದ್ಯಮಾನವು ಒಂದು ಉದಾಹರಣೆಯಾಗಿದ್ದು, ಇದು ಹದಿಹರೆಯದ ಖಿನ್ನತೆಯೊಂದಿಗೆ ಸಂಬಂಧವನ್ನು ಹೊಂದಿದೆ ಎಂದು ಈಗ ತಿಳಿದುಬಂದಿದೆ (ಲಿಥ್ಯಾಟ್-ಹೇಮ್ಸ್, 2015).

ಇಂದಿನ ಅನೇಕ ಸಮಾಜಗಳಲ್ಲಿ ಮಕ್ಕಳು ಆನಂದಿಸುವ ಅಮೂಲ್ಯವಾದ ಮುಗ್ಧವಾಗಿ ಕಾಣುವ ಮುದ್ದಾದ ಮಗುವಿನ ಸ್ಥಾನಮಾನವನ್ನು ಯಾವಾಗಲೂ ಹೊಂದಿರಲಿಲ್ಲ. ಲ್ಯಾನ್ಸಿ (2008) ಅವರು ಮಾನವ ಕುಟುಂಬಗಳ ಇತಿಹಾಸದ ಬಾಲ್ಯದ ಮಾದರಿಗಳ ವ್ಯಾಪಕ ಶ್ರೇಣಿಯನ್ನು ಪ್ರದರ್ಶಿಸಿದ್ದಾರೆ. ಈ ಮಾದರಿಗಳು ಮಕ್ಕಳ ಆರೈಕೆ ಮತ್ತು ಕಲಿಕೆಯ ಬಗ್ಗೆ ಮತ್ತು ಮುಂದೆ ಜೀವನದಲ್ಲಿ ಸಾಂಸ್ಕೃತಿಕ ಕೊಡುಗೆ ನೀಡಲು ವಯಸ್ಕರನ್ನು ಸಿದ್ಧಗೊಳಿಸುವುದಕ್ಕೆ ಮಾರ್ಗದರ್ಶನ ಮಾಡುವುದರ ಬಗ್ಗೆ ಮಾಹಿತಿ ನೀಡುತ್ತವೆ.

ಮಕ್ಕಳಿಗುಂಟಾಗುವ ಅಪಾಯಗಳು ಮತ್ತು ಪುಟಿದೇಳುವ ಅವರ ಸಾಮರ್ಥ್ಯಗಳನ್ನು ಹೆಚ್ಚು ಸಂಶೋಧಿಸಲಾಗಿದ್ದರೂ, ಮಾಂಟೆಸ್ಸರಿ ಉಲ್ಲೇಖಿಸಿದ ಚಿಕ್ಕ ಮಕ್ಕಳ ಹೆಚ್ಚುತ್ತಿರುವ ಅತಿಯಾದ ರಕ್ಷಣೆಗೆ ಸಂಬಂಧಿಸಿದ ಕೆಲವು ಪ್ರಮುಖ ಕಾಳಜಿಗಳಿವೆ. ಹೆಚ್ಚಿನ ವೈಜ್ಞಾನಿಕವಾದ ಆಧುನಿಕ ಆರೈಕೆಯಲ್ಲಿ, ರಕ್ಷಣೆ ಮತ್ತು ಅತಿಯಾದ ರಕ್ಷಣೆಯ ನಡುವೆ ಸಮತೋಲನವನ್ನು ಕಾಯ್ದುಕೊಳ್ಳುವ ಅಗತ್ಯವಿದೆ. ಏಕೆಂದರೆ ಬಾಲ್ಯದಲ್ಲಿ ಅಷ್ಟೇನೂ ಮೇಲ್ವಿಚಾರಣೆ ಇಲ್ಲದೆ ದೊರೆಯುವ ಅನೇಕ ಮಹತ್ತಾದ ಕಲಿಕಾ ಅನುಭವಗಳು ಅಮೂಲ್ಯವಾಗಿರುತ್ತವೆ. ಇದನ್ನು ಸಾಧಿಸಬಹುದಾದ ಒಂದು ಮಾರ್ಗವೆಂದರೆ ಮಕ್ಕಳು ಬೆಳೆಯುವ ವೈವಿಧ್ಯಮಯ ಸನ್ನಿವೇಶಗಳ ಬಗೆಗಿನ ನಮ್ಮ ಸ್ವಂತ ಜ್ಞಾನವನ್ನು ವಿಸ್ತರಿಸಿಕೊಳ್ಳುವುದು. ಕೆಲವು ಸಮಾಜಗಳಲ್ಲಿ, ಕೆಲವು ವಸ್ತುಗಳು ಅಪಾಯಕಾರಿ ಮತ್ತು ಚಾಕುಗಳು ಮತ್ತು ಮಚ್ಚುಗಳೊಂದಿಗೆ ಸುರಕ್ಷಿತವಾಗಿ ಆಡಬಹುದು ಎಂಬುದನ್ನು ಮಕ್ಕಳು ಸಾಕಷ್ಟು ಮುಂಚೆಯೇ ಕಲಿಯುತ್ತಾರೆ (ಲ್ಯಾನ್ಸಿ, 2016). ಈ ದಿಕ್ಕಿನಲ್ಲಿ ಗಮನಾರ್ಹ ಕೊಡುಗೆ ನೀಡಿದ ಬಾಲ್ಮ್ (2010) ಚಲನಚಿತ್ರದಲ್ಲಿ ಇಂತಹ ಉದಾಹರಣೆಗಳು ಲಭ್ಯವಿವೆ. ತುಳಿತಕ್ಕೆ ಒಳಗಾಗಬಹುದಾದ ಅಪಾಯ ಎದುರಿಸುತ್ತಾ ಪ್ರಾಣಿಗಳು, ಶಿಶುಗಳು ಸಹಬಾಳ್ವೆ ನಡೆಸುವ ಮಂಗೋಲಿಯನ್ ಮತ್ತು ನಮೀಬಿಯಾದ ಕುಟುಂಬಗಳ ಬಗ್ಗೆ ಮತ್ತು ರಕ್ಷಣೆ ಒದಗಿಸುವ, ಬೇಲಿ ಹಾಕಿದ ಅಮೇರಿಕನ್ ಮತ್ತು ಜಪಾನಿನ ಮಕ್ಕಳ ಬಗ್ಗೆ ಯಾವ ತೀರ್ಪನ್ನೂ ನೀಡದ ಈ ಸಾಕ್ಷ್ಯಚಿತ್ರವು ಮಕ್ಕಳ ಆರೈಕೆಯ ವೈವಿಧ್ಯವನ್ನು ಸಂಭ್ರಮಿಸುತ್ತದೆ. ಇದಕ್ಕೆ ಮಕ್ಕಳ ಪ್ರಪಂಚದ ಬಗ್ಗೆ ಇರಬಹುದಾದ ನಮ್ಮ ಸೀಮಿತ ಎಣಿಕೆಗಳನ್ನು ಪರಿವರ್ತಿಸಬಲ್ಲ ಸಾಮರ್ಥ್ಯವಿದೆ. ಶಿಶುಪಾಲನೆಗಾಗಿ ಲಭ್ಯವಿರುವ

---

[3] 'ಹೆಲಿಕಾಪ್ಟರ್ ಪೇರೆಂಟಿಂಗ್' ತಮ್ಮ ಮಕ್ಕಳಿಗೆ ಅತೀವ ಗಮನ ನೀಡುವ ಮತ್ತು ಅವರ ಸಮಸ್ಯೆಗಳಿಗೆ, ಅದರಲ್ಲೂ ಶಾಲೆಗಳಲ್ಲಿ ಅವರ ಬಗ್ಗೆ ಸದಾ ವ್ಯಸ್ತವಾಗಿರುವ ಪಾಲಕರಿಗೆ ಇಟ್ಟಿರುವ ಹೆಸರು. ಇವರಿಗೆ ಹೆಲಿಕಾಪ್ಟರ್ ಎನ್ನಲು ಕಾರಣ ಅವರು ಸದಾ, ತಲೆಯ ಮೇಲೆ ಸುತ್ತುವ ಹೆಲಿಕಾಪ್ಟರ್‌ನಂತೆ ಮಗುವಿನ ಪ್ರತಿ ಹೆಜ್ಜೆಯನ್ನೂ ನಿರಂತರವಾಗಿ ಗಮನಿಸುತ್ತಿರುತ್ತಾರೆ.

ಸಂಪನ್ಮೂಲಗಳಲ್ಲಿನ ವ್ಯತಿರಿಕ್ತ ಭಿನ್ನತೆಯು, ಶಿಶುಗಳು ವಾಸ್ತವವಾಗಿ ವಿಭಿನ್ನ ಪರಿಸ್ಥಿತಿಗಳಿದ್ದರೂ ಸಮಾನ ರೀತಿಯ ವರ್ತನೆಗಳನ್ನು, ಅವು ನಡೆಯಲು ಕಲಿಯುವುದಾಗಿರಲಿ ಅಥವಾ ಪ್ರಾಣಿಗಳ ನಡುವೆ ಬದುಕುವುದಾಗಲಿ, ಬೆಳೆಸಿಕೊಳ್ಳುತ್ತವೆ ಎನ್ನುವುದಕ್ಕೆ ಸಾಕ್ಷಿಯಾಗಿದೆ.

ಬಾಲ್ಯಕ್ಕಿರುವ ಸಮಕಾಲೀನ ಬೆದರಿಕೆಗಳು

ಭಾರತದಲ್ಲಿನ ಮಕ್ಕಳ ಪ್ರಸ್ತುತ ಸನ್ನಿವೇಶಗಳ ಸಾಂಖ್ಯಿಕ ಪರಿಶೋಧನೆಯ ಆಧಾರದ ಮೇಲೆ, ಹಲವಾರು ದಿಕ್ಕುಗಳಿಂದ ಬಾಲ್ಯಕ್ಕೆ ಇರುವ ಸಂಭವನೀಯ ಬೆದರಿಕೆಗಳನ್ನು ಎತ್ತಿ ತೋರಿಸಲು ನಾನು ಬಯಸುತ್ತೇನೆ. ಹಿಂದಿನ ತಲೆಮಾರಿನ ಮಕ್ಕಳಿಗೆ ಹೋಲಿಸಿದರೆ ಹೆಚ್ಚಿದ ಆಯ್ಕೆಗಳು, ಉತ್ತಮ ಜೀವನ ಮಟ್ಟಗಳು, ಹೆಚ್ಚಿನ ಶಾಂತಿ, ಬದುಕುಳಿಯುವಿಕೆ ಮತ್ತು ಭದ್ರತೆಯ ಪುರಾವೆಗಳಿದ್ದರೂ, ಪ್ರಜಾಪ್ರಭುತ್ವ ಮತ್ತು ಮಾನವತಾವಾದದ ತತ್ವಗಳಿಗೆ ಅನುಗುಣವಾಗಿ ನಾವು ನಮ್ಮ ವೈವಿಧ್ಯತೆಯನ್ನು ಪ್ರಜ್ಞಾಪೂರ್ವಕವಾಗಿ ಉಳಿಸಿಕೊಳ್ಳುವ ಅಗತ್ಯವಿದೆ. ನನ್ನ ಬಯಕೆಯು ಕಷ್ಟಕರ ಸಂದರ್ಭಗಳನ್ನು ಆದರ್ಶೀಕರಿಸುವುದು ಅಥವಾ ಸಾಂಪ್ರದಾಯಿಕ ಜೀವನ ವಿಧಾನಗಳನ್ನು ಸಂರಕ್ಷಿಸಲು ಅಥವಾ ಅದಕ್ಕೆ ಹಿಂದಿರುಗಲು ಮನವಿ ಮಾಡುವುದು ಅಲ್ಲ. ಏಕೆಂದರೆ ಆ ಸಂದರ್ಭಗಳು ವಿಶೇಷವಾಗಿ ಮಹಿಳೆಯರು ಮತ್ತು ಹುಡುಗಿಯರಿಗೆ ಕಠಿಣವಾಗಿದ್ದವು. ಮನೆಯ ಕೆಲಸ ಕಾರ್ಯಗಳು ಅನೇಕ ಮಕ್ಕಳನ್ನು ಮನೆಯಲ್ಲಿಯೇ ಉಳಿಯುವಂತೆ ಮಾಡಿ ಅವರು ಬೃಹತ್ ಆರ್ಥಿಕತೆಯಲ್ಲಿ ಭಾಗವಹಿಸುವುದನ್ನು ತಡೆಯುತ್ತವೆ. ಬಡತನವು ತುರ್ತು ಗಮನ ನೀಡಬೇಕಾದ ಅಗತ್ಯವಿರುವ ಪರಿಸ್ಥಿತಿಗಳ ಅತ್ಯಂತ ಕಷ್ಟಕರವಾದ ಸಮುದಾಯಗಳಲ್ಲಿ ಒಂದಾಗಿದೆ. ಆದಾಗ್ಯೂ, ಸಾಮಾಜಿಕ ಬದಲಾವಣೆ ಮತ್ತು ಶೈಕ್ಷಣಿಕ ಅವಕಾಶಕ್ಕಾಗಿ ಯೋಜಿಸುತ್ತಿರುವಾಗ, ನಾವು ಸ್ನಾನ ಮಾಡಿಸಿದ ನೀರಿನೊಡನೆ ಮಗುವನ್ನೂ ಎಸೆಯುವುದಿಲ್ಲ ಎಂದು ಖಚಿತಪಡಿಸಿಕೊಳ್ಳಲು ಅನೇಕ ಸುರಕ್ಷತೆಗಳನ್ನು ಇರಿಸಿಕೊಳ್ಳಬೇಕಾಗುತ್ತದೆ.

'ಏಕರೂಪತೆಯೆಂಬ ಜಾಗತಿಕ ಸಾಂಕ್ರಾಮಿಕತೆ'

> ನಾವು ಇಂದು ಅಸ್ತಿತ್ವದಲ್ಲಿರುವ ಅಗಾಧ ವೈವಿಧ್ಯತೆಯನ್ನು ಗಣನೆಗೆ ತೆಗೆದುಕೊಳ್ಳಲು ಸಾಧ್ಯವಾಗುವುದಕ್ಕಿಂತ ಮುಂಚೆಯೇ - ವಿವರಿಸಲಾಗದ ಸೂಕ್ಷ್ಮಜೀವಿಗಳಿಂದ ಹಿಡಿದು ದಾಖಲಿಸದಿರುವ ಭಾಷೆಗಳವರೆಗೆ- ಈ ಸಾಂಕ್ರಾಮಿಕವು [ಏಕರೂಪತೆಯೆಂಬ ಜಾಗತಿಕ ಸಾಂಕ್ರಾಮಿಕತೆ] ಪ್ರತಿ ಎರಡು ವಾರಗಳಿಗೊಮ್ಮೆ ಒಂದು ಇಡೀ ಮಾನವ ಭಾಷೆಯನ್ನು ಕೊಚ್ಚಿ ಹಾಕುತ್ತದೆ. ಪ್ರತ್ರಿ ಆರು ಗಂಟೆಗೊಮ್ಮೆ ದೇಶೀಯ ಆಹಾರಧಾನ್ಯ ತಳಿಯೊಂದನ್ನು ನಾಶಪಡಿಸುತ್ತದೆ ಮತ್ತು ಪ್ರತಿ ಕೆಲವು ನಿಮಿಷಗಳಲ್ಲಿ ಇಡೀ ಒಂದು ಪ್ರಭೇದವನ್ನೇ ಕೊಲ್ಲುತ್ತಿದೆ.... ಸಂಸ್ಕೃತಿಗಳು ಮತ್ತು ಭಾಷೆಗಳು ಕಣ್ಮರೆಯಾಗುತ್ತಿದ್ದಂತೆ, ಅವುಗಳ ಜೊತೆಗೆ ಸಂಗ್ರಹವಾದ ಜ್ಞಾನದ ವಿಶಾಲವಾದ ಪ್ರಾಚೀನ ಸಂಗ್ರಹಾಲಯಗಳು ಮರೆಯಾಗುತ್ತವೆ; ಮತ್ತು ಜೀವಪ್ರಭೇದಗಳು ಕಣ್ಮರೆಯಾಗುತ್ತಿದ್ದಂತೆ, ಅವುಗಳ ಜೊತೆಗೆ ಅಮೂಲ್ಯವಾದ ಆನುವಂಶಿಕ ಸಂಪನ್ಮೂಲಗಳು ಮಾತ್ರವಲ್ಲ, ಸಂಕೀರ್ಣ ಪರಿಸರ ಜಾಲಗಳಲ್ಲಿನ ನಿರ್ಣಾಯಕ ಕೊಂಡಿಗಳೂ ಕಳಚಿ ಹೋಗುತ್ತವೆ.
>
> (ಮಾಂಟೆನೆಗ್ರೊ ಮತ್ತು ಗ್ಲಾವಿನ್, 2005, ಪು. 1)

ವಾಸ್ತವವಾಗಿ, ಹಿಂದಿನ ಲೇಖನದ ಲೇಖಕರು ಜೈವಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿನ ವೈವಿಧ್ಯತೆಗೆ ಬೆದರಿಕೆಯು ಅನುಸರಣೆಯ ಬಯಕೆಯ ಒಂದೇ ಮೂಲದಿಂದ ಉಂಟಾಗುತ್ತದೆ ಎಂದು ವಾದಿಸುತ್ತಾರೆ. ಸಾಮಾಜಿಕ ಮತ್ತು ನೈಸರ್ಗಿಕ ವ್ಯವಸ್ಥೆಗಳು ಹಲವಾರು ರೀತಿಯಲ್ಲಿ ಅಂತರಕ್ರಿಯೆ ನಡೆಸುತ್ತವೆ; ಭಾಷೆಗಳು ಮತ್ತು ಸೂಕ್ಷ್ಮಾಣುಗಳ ನಾಶವು ವಾಸ್ತವವಾಗಿ ಅದೇ ಲಕ್ಷಣಾವಳಿಯಿಂದ ಉಂಟಾಗಬಹುದು. ಪಸರಿಸುತ್ತಿರುವ ವೈವಿಧ್ಯತೆಯ ನಾಶವನ್ನು ಗುರುತಿಸುವಲ್ಲಿ ಮತ್ತು ತಡೆಹಿಡಿಯುವುದರಲ್ಲಿ ನಮ್ಮ ಸಾಮೂಹಿಕ ವೈಫಲ್ಯವನ್ನು ಅದು ಮುಂದುವರಿಯುತ್ತಿರುವ ವೇಗಕ್ಕೆ ಭಾಗಶಃ ಆರೋಪಿಸಬಹುದು. (ಮಾಂಟೆನೆಗ್ರೊ ಮತ್ತು ಗೇವಿನ್, 2015, ಪು. 2).

ಜನಾಂಗೀಯ ವೈವಿಧ್ಯತೆಯ ಕಣ್ಮರೆಯು ಜೀವವೈವಿಧ್ಯದ ಕಣ್ಮರೆಯೊಂದಿಗೆ ನಿಕಟ ಸಂಬಂಧವನ್ನು ಹೊಂದಿದೆ (ಮಾಫಿ ಮತ್ತು ವುಡ್ಲಿ, 2012). 'ಇತರ' ಜೀವನ ವಿಧಾನಗಳ ಈ ಮೊಟಕು ಮತ್ತು ಅಸಹಿಷ್ಣುತೆಯು ಜನಾಂಗೀಯತೆಯ (ಜನಾಂಗ ಕೇಂದ್ರತೆ) ಅಭಿವ್ಯಕ್ತಿಯಾಗಿದೆ ಮತ್ತು ಪ್ರಾರಂಭದಲ್ಲಿ ಊಹಿಸಲು ಸಾಧ್ಯವಿಲ್ಲದಿರುವಂತಹ ಕೆಲವು ದೂರಗಾಮಿ ಪರಿಣಾಮಗಳನ್ನು ಹೊಂದಿದೆ. ನಾವು ಈ ಪ್ರಯತ್ನವು ವಿಫಲವಾಗಲಿ ಎಂದು ಮಾತ್ರ ಆಶಿಸಬಹುದು.

ಅಂತಾರಾಷ್ಟ್ರೀಯ ನೆರವು ಅಥವಾ ಶಿಕ್ಷಣ ಸಂಸ್ಥೆಗಳಲ್ಲಿ ವಲಸಿಗರ ಸಾಮಾಜಿಕ ಬದಲಾವಣೆಗಾಗಿ ಪ್ರಯತ್ನಿಸಿದಾಗ, ಉದ್ದೇಶಿತ ಪರಿಣಾಮವು ಇತರರ ಜೀವನದ ಸುಧಾರಣೆಗಾಗಿ ಎಂಬ 'ಅಭಿವೃದ್ಧಿ'ಯ ಪ್ರವಚನದಲ್ಲಿ ಅಡಗಿಕೊಳ್ಳುತ್ತದೆ. ಪರ್ವಿಸ್ ಮತ್ತು ಕೆನಡಿ (2016) ವಾದಿಸುವಂತೆ, ಸ್ವಯಂಸೇವಕ ಕೆಲಸವನ್ನು ಹೆಚ್ಚಾಗಿ ಈ ಅನಿಯಂತ್ರಿತ ಉದ್ಯಮದಲ್ಲಿ ಫಲಾನುಭವಿಗಳಿಗಿಂತ ಹೆಚ್ಚಾಗಿ 'ಪ್ರವಾಸಿಗರ' ಉದ್ಯಮದೊಂದಿಗೆ ನಡೆಸಲಾಗುತ್ತದೆ. ಬಹುತೇಕ ಯಾವಾಗಲೂ, ನೀತಿ ನಿರೂಪಕರು ಅಂತಹ ಮಧ್ಯಸ್ಥಿಕೆಗಳನ್ನು ಸ್ವೀಕರಿಸುವವರಾಗಿರುವುದಿಲ್ಲ ಮತ್ತು ಯೋಜನೆಗಳನ್ನು ಬೇರೆಯವರನ್ನು ಗಮನದಲ್ಲಿಟ್ಟುಕೊಂಡು ತಯಾರಿಸಿ ಕಾರ್ಯಗತಗೊಳಿಸಲಾಗುತ್ತದೆ. ಒದಗಿಸುವ ಸೇವೆಯ ಫಲಾನುಭವಿಗಳು ನಾವಾಗಿದ್ದರೆ, ಬಹುಶಃ ಸಾಮಾಜಿಕ ಮಧ್ಯಸ್ಥಿಕೆಗಳು ಅವರು ಇಂದು ಮಾಡುತ್ತಿರುವುದಕ್ಕಿಂತ ಭಿನ್ನವಾಗಿ ಕಾಣುತ್ತಿದ್ದವು.

ಇತರ ಜನರ ಜೀವನವನ್ನು ಸುಧಾರಿಸುವ ಈ ಯೋಜನೆಯು ಜನಾಂಗೀಯತೆಯಲ್ಲಿ ಬೇರುಗಳನ್ನು ಹೊಂದಿದೆ. ಇತರರಿಗೆ ಯಾವುದು ಒಳ್ಳೆಯದು ಎಂದು ನಮಗೆ ತಿಳಿದಿದೆ ಎಂಬ ಊಹೆಯು ಯಾವಾಗಲೂ ಮಾನ್ಯವಾಗಿಲ್ಲ. ಉದಾಹರಣೆಗೆ, ಆರ್ಥಿಕವಾಗಿ ಹಿಂದುಳಿದವರಲ್ಲಿ ನಿರ್ಧಾರ ತೆಗೆದುಕೊಳ್ಳುವ ಇತ್ತೀಚಿನ ವಿಶ್ಲೇಷಣೆಯಲ್ಲಿ, ಮುಳ್ಳಯ್ಯನಾಥನ್ ಮತ್ತು ಶಫೀರ್ (2014) ಜನರು ಕೆಟ್ಟ ನಿರ್ಧಾರಗಳನ್ನು ತೆಗೆದುಕೊಳ್ಳುವ ಕಾರಣದಿಂದ ಬಡವರಲ್ಲ ಎಂದು ವಾದಿಸುತ್ತಾರೆ. ಆದರೆ ವಾಸ್ತವವಾಗಿ ಅವರು ಬಡವರಾಗಿರುವುದರಿಂದ ಕೆಟ್ಟ ನಿರ್ಧಾರಗಳನ್ನು ಮಾಡುತ್ತಾರೆ. ನಾವು ಎರಡನೆಯದನ್ನು ನಂಬುವ ಬದಲು ಮೊದಲನೆಯದನ್ನು ನಂಬುತ್ತೇವೆ. ಬಡತನದಲ್ಲಿ ವಾಸಿಸುವ ಜನರ ಸಾಂಸ್ಕೃತಿಕ ಆಚರಣೆಗಳು ಬಹುಶಃ ಅವರ ಪರಿಸ್ಥಿತಿಗೆ ಉತ್ತಮ ಹೊಂದಾಣಿಕೆಗಳಾಗಿರಬಹುದು, ಏಕೆಂದರೆ ಮಧ್ಯವರ್ತಿ ಮೂಲಗಳಿಂದ ತಿಳಿದದ್ದು ಮಾತ್ರವಷ್ಟೇ ಹೊರತು ನಮಗೆಂದೂ ವಾಸ್ತವ ತಿಳಿಯುವುದಿಲ್ಲ ನಾವು ನಂಬಿಕೆಗಳು, ವರ್ತನೆಗಳು ಮತ್ತು ಆಚರಣೆಗಳಲ್ಲಿ ಬದಲಾವಣೆಯನ್ನು ತರಬೇಕೆಂದು ಶಿಫಾರಸು ಮಾಡುವಾಗ ಜನರು ಮತ್ತು ಅವರ ಪರಿಸರಗಳ ನಡುವೆ ಇರುವ ಜಟಿಲವಾದ ಪರಸ್ಪರ ಸಂಬಂಧಗಳನ್ನು ವಾಸ್ತವವಾಗಿ ಹೆಚ್ಚು ಪರಿಗಣಿಸುವುದಿಲ್ಲ.

ಏಕರೂಪತೆ ಅನಿವಾರ್ಯ ಎಂದು ನಾನು ಸೂಚಿಸುವುದಿಲ್ಲ. ಆದರೆ ಅದು ನಾವು ಜಾಗರೂಕತೆ ವಹಿಸಬೇಕಾದ ವಿಷಯಗಳಲ್ಲಿ ಒಂದಾಗಿದೆ. ಉದಾಹರಣೆಗೆ, ರೋಗೋಫ್ (2011) ಗ್ವಾಟೆಮಾಲಾದ ಸ್ಯಾನ್ ಪೆಡ್ರೊ ಲಾ ಲಗುನಾದ ಮಾಯನ್ ಸಮುದಾಯದಲ್ಲಿ ಆಧುನಿಕತೆಯು ಮಕ್ಕಳ ಜೀವನದಲ್ಲಿ ಹೆಚ್ಚಿನ ವೈವಿಧ್ಯತೆಗೆ ಕಾರಣವಾಗಿದೆ ಎಂಬುದಕ್ಕೆ ಪುರಾವೆಗಳನ್ನು ಒದಗಿಸುತ್ತಾರೆ. ಆದಾಗ್ಯೂ ಸಾಂಪ್ರದಾಯಿಕ ಜೀವನ ವಿಧಾನಗಳು ಕಡಿಮೆಯಾಗುತ್ತಿವೆ ಮತ್ತು ಮಕ್ಕಳು ಶಾಲೆಗೆ ಹೋಗುತ್ತಾರೆ ಮತ್ತು ಅವರು ಮನೆಗಳ ಹೊರಗೆ ಜೀವನ ನಿರ್ವಹಣೆಗಾಗಿ ಉದ್ಯೋಗ ಮಾಡುತ್ತಾರೆ. ಇದು ಹೆಚ್ಚಿನ ವೈವಿಧ್ಯತೆಗೆ ಕಾರಣವಾಗಿದೆ. ಇದು ನಿಜವಾಗಿ ಮಕ್ಕಳಿಗೆ ಒದಗಿಸಬೇಕಾದ ಶಿಕ್ಷಣವಾಗಿದೆ ಮತ್ತು ಅದು ಸಾಧ್ಯವಾದಾಗ, ಆರಂಭಿಕ ವರ್ಷಗಳಲ್ಲಿ ಮಕ್ಕಳು ಶಾಲೆಗೆ ಹೋಗಲು ತುಂಬಾ ಸಂತೋಷಪಡುತ್ತಾರೆ. ಆದರೆ ಉನ್ನತ ತರಗತಿಗಳಿಗೆ ಹೋದಂತೆ ಬಹಳಷ್ಟು ಮಕ್ಕಳಿಗೆ ಏನೋ ಸರಿಯಿಲ್ಲ ಎನಿಸತೊಡಗುತ್ತದೆ.

ಬಾಲ್ಯದ ಬಗ್ಗೆಯೂ ಸಹ, ಎಲ್ಲರಂತೆ ಇರಬೇಕೆಂಬ ಬೇಡಿಕೆ ಮತ್ತು ಬಯಕೆ ಹೆಚ್ಚುತ್ತಿರುವಂತೆ ತೋರುತ್ತಿದೆ ಮತ್ತು ಮಕ್ಕಳನ್ನು ನಾವು ಅನುಕೂಲಕರವೆಂದು ಪರಿಗಣಿಸಿದ ಮಾದರಿಗಳಾಗಿರಲು ಒತ್ತಾಯಿಸುತ್ತೇವೆ. ವಾಣಿಜ್ಯ ಆಸಕ್ತಿಗಳು ಮತ್ತು ಮಾಹಿತಿಯ ಸುಲಭ ಪ್ರವೇಶದಿಂದ ಉತ್ತೇಜಿಸಲ್ಪಟ್ಟ ಜಾಗತಿಕ ವಿದ್ಯಮಾನಗಳು, ಮಕ್ಕಳು ಹೇಗಿರಬೇಕು ಮತ್ತು ಹೇಗೆ ವರ್ತಿಸಬೇಕು ಎಂಬುದನ್ನು ಹೆಚ್ಚು ಹೆಚ್ಚು ವ್ಯಾಖ್ಯಾನಿಸುತ್ತಿವೆ. ಸಾಮಾನ್ಯವಾಗಿ ಶ್ರೀಮಂತರಿಂದ ವ್ಯಾಖ್ಯಾನಿಸಲಾದ ಈ 'ಜಾಗತಿಕ ಮಾನದಂಡಗಳನ್ನು' ಸಾಧಿಸಲು, ಆರೈಕೆಯ ಆಚರಣೆಗಳು ಪ್ರಭಾವಕ್ಕೊಳಗಾಗುತ್ತಿವೆ ಮತ್ತು ಇತ್ತೀಚೆಗೆ ಸ್ಕ್ಯಾಂಡಿನೇವಿಯನ್ ದೇಶಗಳಿಂದ ವಲಸೆ ಬಂದ ಪೋಷಕರ ಪ್ರಕರಣಗಳಲ್ಲಿ ನಾವು ನೋಡಿದಂತೆ ಶೀಘ್ರದಲ್ಲೇ 'ಮಕ್ಕಳನ್ನು ಬೆಳೆಸಲು ಸರಿಯಾದ ಮಾರ್ಗ' ಹೊರಹೊಮ್ಮಬಹುದು. ದೌರ್ಜನ್ಯದ ಅನುಮಾನದ ಕಾರಣದಿಂದ ಮಕ್ಕಳನ್ನು ಪೋಷಕರಿಂದ ದೂರ ಮಾಡುವ ನಿರ್ದಿಷ್ಟ ನಿದರ್ಶನಗಳು ಹೆಚ್ಚುತ್ತಿವೆ. ಮಗುವಿನ ಸುರಕ್ಷತೆಯ ಬಗ್ಗೆ ಕೆಲವು ಅನುಮಾನಗಳು ಇದ್ದಾಗ ಈ ಸೇವೆಗಳನ್ನು ಬಳಸಿಕೊಳ್ಳಲಾಗುತ್ತದೆ. ಇದು ಮಕ್ಕಳ ರಕ್ಷಣೆಗಾಗಿಯೇ ಇರುವ ಸರ್ಕಾರಿ ಸೇವೆಯಾಗಿದ್ದರೂ, ಅವರಿಗಷ್ಟೇ ಮೀಸಲಾಗಿರದಿದ್ದರೂ ವಿಶೇಷವಾಗಿ ವಲಸಿಗ ಪೋಷಕರ ವೈವಿಧ್ಯತೆಯ ಸಹಿಷ್ಣುತೆಯ ಇಳಿಕೆಯು ಇತ್ತೀಚಿನ ದಿನಗಳಲ್ಲಿ ಸ್ಪಷ್ಟವಾಗಿ ಕಂಡುಬಂದಿದೆ.

ಇತ್ತೀಚಿನ ವರ್ಷಗಳಲ್ಲಿ ನಾರ್ವೆ ಮತ್ತು ಯುನೈಟೆಡ್ ಸ್ಟೇಟ್ಸ್ ನಲ್ಲಿ ಭಾರತೀಯ ಪೋಷಕರ ಮಕ್ಕಳನ್ನು ಸುರಕ್ಷತೆಗಾಗಿ ಸರ್ಕಾರ ಸುಪರ್ದಿಗೆ ತೆಗೆದುಕೊಂಡು ಇತರ ಪೋಷಕ ಆರೈಕೆಯಲ್ಲಿ ಇರಿಸಲಾಗಿರುವ ನಿರ್ದಿಷ್ಟ ನಿದರ್ಶನಗಳಿವೆ. ಹೆಚ್ಚಾಗಿ, ಸಿಬ್ಬಂದಿಗಳು ಮನೆಗಳಿಗೆ ಭೇಟಿ ನೀಡಿದಾಗ ಮತ್ತು ಸ್ಥಳೀಯ ಆರೈಕೆಯ ಸಿದ್ಧಾಂತಕ್ಕೆ ವಿರುದ್ಧವಾದ ಆಚರಣೆಗಳನ್ನು ಗಮನಿಸಿದಾಗ ಅಂದರೆ ಮಕ್ಕಳಿಗೆ ಕೈಯಿಂದ ಆಹಾರ ನೀಡುವುದು (ಬಲವಂತದ ಆಹಾರ ಎಂದು ಅರ್ಥೈಸಲಾಗುತ್ತದೆ) ಅಥವಾ ಜೊತೆಯಲ್ಲಿ ಮಲಗಿಸಿಕೊಳ್ಳುವ (ದುರುಪಯೋಗ ಎಂದು ಅರ್ಥೈಸಲಾಗುತ್ತದೆ) ಸಂದರ್ಭದಲ್ಲಿ ಹೀಗೆ ಮಾಡಲಾಗಿದೆ. ತಮಗೆ ಅರಿವಿಲ್ಲದೆಯೇ, ಕುಟುಂಬಗಳು ತಮ್ಮ ಮಕ್ಕಳ ಸುಪರ್ದಿಗಾಗಿ ಹೋರಾಟದಲ್ಲಿ ಸಿಕ್ಕಿಹಾಕಿಕೊಂಡಿವೆ. ನಾರ್ವೆಯಲ್ಲಿ, ಈ ಮೇಲ್ವಿಚಾರಣೆಯು ಪ್ರವಾಸಿಗರಾಗಿ ದೇಶಕ್ಕೆ ಪ್ರಯಾಣಿಸುವ

ಜನರಿಗೂ ಸಹ ಅನ್ವಯಿಸುತ್ತದೆ. ಇತರ ಸಂಸ್ಕೃತಿಗಳೊಡನೆ ಹೋಲಿಸಿದಾಗ ನಮ್ಮ ಸ್ಥಾನ ಎಲ್ಲಿದೆ? ಹಾನಿಕಾರಕ ಆಚರಣೆಗಳು ಮತ್ತು ಸಾಂಸ್ಕೃತಿಕ ವೈವಿಧ್ಯತೆಯ ನಡುವೆ ನಾವು ವ್ಯತ್ಯಾಸವನ್ನು ಗುರುತಿಸಬಹುದೇ?

ಮತ್ತೊಮ್ಮೆ, ಈ ಕಾರ್ಯ ಸುಲಭವಲ್ಲದಿದ್ದರೂ ಅದನ್ನು ಮಾಡಬೇಕಾಗಿದೆ. ತಮಗೆ ಪರಿಚಿತವಾದ ನಿಯಮಗಳನ್ನು ಅನುಸರಿಸಿ, ಪ್ರೀತಿಯಿಂದ ಆರೈಕೆ ಮಾಡುವ ಪಾಲಕರಿಂದ ಮಕ್ಕಳನ್ನು ಬೇರ್ಪಡಿಸಿ ಮಕ್ಕಳ ಮೇಲೆ ದೌರ್ಜನ್ಯವೆಸಗಿ ಮಕ್ಕಳ ರಕ್ಷಣಾ ಸೇವೆಗಳು ತಾವು ನಿರೋಧಿಸಬೇಕಾದದ್ದನ್ನೇ ಮಾಡಿ ತಪ್ಪಿತಸ್ಥರಾಗದಂತೆ ನಾವು ಪ್ರಪಂಚದ ವಿವಿಧ ಭಾಗಗಳಲ್ಲಿನ ನೀತಿಗಳನ್ನು ಮೌಲ್ಯಮಾಪನ ಮಾಡಬೇಕಿದೆ. ಈ ಹಿಂದೆ ಪ್ರದರ್ಶಿಸಿದ ಸಾಂಸ್ಕೃತಿಕ ಜನಾಂಗೀಯತೆಗೆ ಸಂಪೂರ್ಣ ವ್ಯತಿರಿಕ್ತವಾಗಿ, ಭಾರತವು ಅಂತಹ ಯಾವುದೇ ನೀತಿಯನ್ನು ಉಳಿಸಿಕೊಂಡಿಲ್ಲ. ಆಚರಣೆಗಳು ಸ್ಥಳೀಯ ಸಿದ್ಧಾಂತಕ್ಕೆ ವಿರುದ್ಧವಾಗಿದ್ದರೂ ಸಹ, ವಿವಿಧ ದೇಶಗಳ ವಲಸಿಗರು ಮಕ್ಕಳನ್ನು ತಮ್ಮ ಇಚ್ಛೆಯಂತೆ ಬೆಳೆಸಲು ಸ್ವತಂತ್ರರು. ಮೂಲ ಸಂಸ್ಕೃತಿಯೊಳಗೆ ಮಕ್ಕಳು ಬೆರೆಯಲು ತೊಂದರೆಯಾಗದಂತೆ ಅವರು ತಮ್ಮ ಮಕ್ಕಳಿಗೆ ಶಾಲೆಗಳನ್ನು ಸ್ಥಾಪಿಸಲು ಸ್ವತಂತ್ರರು. ಇಲ್ಲಿ ಸಿರಿವಂತಿಕೆಯ ರಾಜಕಾರಣವಿರುವುದು ಸ್ಪಷ್ಟ. ಆರೈಕೆಯ ಸಾಂಸ್ಕೃತಿಕ ಆಚರಣೆಗಳು ಮಕ್ಕಳು ವಾಸಿಸುವ ಸಾಮಾಜಿಕ, ಭೌಗೋಳಿಕ, ಐತಿಹಾಸಿಕ ಮತ್ತು ಪಾರಿಸಾರಿಕ ಸನ್ನಿವೇಶಗಳಿಗೆ ಹೊಂದಿಕೊಳ್ಳುತ್ತವೆ. ಇದರ ಜೊತೆಗೆ, ವಿವಿಧ ಸಾಮಾಜಿಕ ಗುಂಪುಗಳಿಗೆ ನಿರಾಕರಿಸಲಾಗದ ಹಕ್ಕುಗಳಾಗಿ ಆದ್ಯತೆಯ ಕೆಲವು ಅಭಿವೃದ್ಧಿಯ ಮಾರ್ಗಗಳಿವೆ.

ಭಿನ್ನತೆಯನ್ನು ಸಂರಕ್ಷಿಸುವುದು ಕೇವಲ ಮಾನವ ಹಕ್ಕುಗಳು ಮತ್ತು ಸಾಂಸ್ಕೃತಿಕ ಭಿನ್ನತೆಯ ಸಮಸ್ಯೆಯಲ್ಲ ಎಂದು ನಾನು ವಾದಿಸುತ್ತೇನೆ; ಇದು ಬದುಕಿಗಾಗಿ ನಡೆಸುವ ಹೋರಾಟವಾಗಿದೆ. ಶಾಲಾ ಶಿಕ್ಷಣವು ಪ್ರಗತಿಗೆ ಒಂದು ಪ್ರಮುಖ ಮಾರ್ಗವಾಗಿದ್ದರೂ, ಶಿಕ್ಷಣವು ವೈವಿಧ್ಯತೆ, ಬಹುಭಾಷಿಕತೆ, ಜನಾಂಗೀಯತೆ ಮತ್ತು ಪ್ರಾದೇಶಿಕ ವ್ಯತ್ಯಾಸಗಳ ಸಮಸ್ಯೆಗಳನ್ನು ಪರಿಹರಿಸಬೇಕು. ಶಾಲೆಯು ಜಾತ್ಯತೀತ ಸ್ಥಳವಾಗಬೇಕಾಗಿರುವುದರಿಂದ, ಸಮುದಾಯದ ರಾಜಕೀಯದಿಂದ ಮುಕ್ತವಾಗಿರುವುದರಿಂದ, ಮನೆಯ ಜೀವನ ಪದ್ಧತಿಯನ್ನು ಶಾಲೆಯಿಂದ ಹೊರಗಿಡಬೇಕಾದ ಪ್ರವೃತ್ತಿ ಇದೆ. ವಾಸ್ತವವಾಗಿ, ಇದು ಮಕ್ಕಳಿಗೆ ಅನುಕೂಲಕರವಲ್ಲ, ವಿಶೇಷವಾಗಿ ಅವರ ಅನುಭವಗಳನ್ನು ವಾಸ್ತವವಾಗಿ ಅಂಗೀಕರಿಸುವ ಮೂಲಕ ಕಲಿಕೆಯನ್ನು ಹೆಚ್ಚಿಸಲು ಉದ್ದೇಶಿಸಬೇಕಾಗಿದೆ. ಹಾಗಾದರೆ ಶಾಲಾ ಶಿಕ್ಷಣವನ್ನು ಇನ್ನಷ್ಟು ಸೂಕ್ಷ್ಮವಾಗಿ ಹತ್ತಿರದಿಂದ ಗಮನಿಸೋಣ.

ದೂರವುಳಿದ ಶಾಲೆ

ಪ್ರತಿ ನೆರೆಹೊರೆಯಲ್ಲಿನ ಮಕ್ಕಳನ್ನು ವಯಸ್ಸಿಗನುಗುಣವಾಗಿ ಶಾಲೆಯಲ್ಲಿ ಒಟ್ಟುಗೂಡಿಸುವ ಕಲ್ಪನೆಯು ಕೈಗಾರಿಕಾ ಕ್ರಾಂತಿಯ ಇತಿಹಾಸವನ್ನು ಹೊಂದಿದೆ. ಈ ಪ್ರಕಾರದ ಶಾಲೆಗಳನ್ನು ಎರಡು ಪ್ರಾಥಮಿಕ ಉದ್ದೇಶಗಳಿಗಾಗಿ, ಒಂದು, ಕಾರ್ಖಾನೆಗಳಲ್ಲಿ ಕೆಲಸ ಮಾಡಲು ವಯಸ್ಕ ಮಾನವಶಕ್ತಿಯನ್ನು ಮುಕ್ತವಾಗಿಡಲು ಮತ್ತು ಎರಡನೆಯದಾಗಿ, ಮುಂದಿನ ಪೀಳಿಗೆಗೆ ಇದೇ ರೀತಿಯ ಉದ್ಯೋಗಗಳಿಗೆ ತರಬೇತಿ ನೀಡಲು ಆವಿಷ್ಕರಿಸಲಾಯಿತು (ವಾಲ್ಸಿನರ್, 2003). ಸದ್ಯದ ಪ್ರಸ್ತುತ ಸ್ಥಿತಿಯಲ್ಲಿ, ಶಾಲೆಗಳನ್ನು ತೆರೆಯಲು ಸಾರ್ವತ್ರಿಕವಾಗಿ ಅಂಗೀಕರಿಸಲ್ಪಟ್ಟ ಮೂರು ಉದ್ದೇಶಗಳಿವೆ: ಆರ್ಥಿಕ

ಪ್ರಗತಿ; ಸಂಸ್ಕೃತಿಯ ಪ್ರಸರಣ ಮತ್ತು ಮಕ್ಕಳ ಬೌದ್ಧಿಕ ಮತ್ತು ನೈತಿಕ ಬೆಳವಣಿಗೆ; ಆರ್ಥಿಕ, ಸಾಂಸ್ಕೃತಿಕ ಮತ್ತು ಬೋಧನಾವಿಧಾನದ ಕಾರ್ಯಸೂಚಿಗಳು (ಸರ್ಪೆಲ್, 1993).

ಒಂದು ಸಂಸ್ಥೆಯ ವಿಮರ್ಶಾರಹಿತ ಸ್ವೀಕಾರದಲ್ಲಿ, ಏಕರೂಪತೆ, ಪ್ರಗತಿ ಮತ್ತು ಅಭಿವೃದ್ಧಿಯ ಬಯಕೆಯಲ್ಲಿ, ಬಹುಪಾಲು ಭಾರತೀಯರ ಸಾಂಸ್ಕೃತಿಕ ಜೀವನಕ್ಕೆ ವಿರುದ್ಧವಾದ ರಚನೆಯನ್ನು ನಾವು ಅಳವಡಿಸಿಕೊಂಡಿದ್ದೇವೆ. ಸರ್ಪೆಲ್ ಅವರ ಜಾಂಬಿಯಾದಲ್ಲಿನ ಶಾಲೆಗಳ ವಿಶ್ಲೇಷಣೆಯಂತೆ, ಶಾಲೆಯು ಅಂತಿಮವಾಗಿ ವೈಯಕ್ತಿಕ ಅನುಭವವಾಗಿದೆ ಮತ್ತು ಸಾಮೂಹಿಕ ಮಟ್ಟದಲ್ಲಿ, ನಾವು ಸಾಮಾನ್ಯವಾಗಿ ಶಾಲೆಗೆ ಸೇರ್ಪಡೆಗೊಂಡ ಮಕ್ಕಳ ಸಂಖ್ಯೆಯ ಆಧಾರದ ಮೇಲೆ ಪ್ರಗತಿಯನ್ನು ಊಹಿಸುತ್ತೇವೆ ಮತ್ತು ಶಾಲೆಗಳು ಸತತವಾಗಿ ಅಂತಹ 'ಆದರ್ಶ ಸಂಶ್ಲೇಷಣೆಯ ಕೊರತೆಯನ್ನು ಹೊಂದಿವೆ' (ಸರ್ಪೆಲ್, 1993, ಪು. 1). ಶಾಲಾ ಶಿಕ್ಷಣದ ಆರ್ಥಿಕ ಕಾರ್ಯಸೂಚಿಗೆ ವಿರುದ್ಧವಾಗಿದ್ದಾಗ ಕುಟುಂಬ ಮತ್ತು ಸಮುದಾಯದ ಸಾಂಸ್ಕೃತಿಕ ವಾಸ್ತವತೆಯ ನಡುವೆ ಪ್ರಮುಖ ಸಂಘರ್ಷ ಉಂಟಾಗುತ್ತದೆ. ಇದು ಪ್ರಾಥಮಿಕವಾಗಿ ಪ್ರಪಂಚದ ಎಲ್ಲಾ ಭಾಗಗಳಲ್ಲಿ, ಶ್ರೀಮಂತ ರಾಷ್ಟ್ರಗಳಲ್ಲಿಯೂ ಕೂಡ ಬಡವರ ನಡುವೆ ಸಂಭವಿಸುತ್ತದೆ.

ವೈಯಕ್ತಿಕವಾಗಿ ಮಕ್ಕಳು ಶಾಲೆಯಿಂದ ಗಣನೀಯವಾಗಿ ಪ್ರಯೋಜನ ಪಡೆಯದ ಹೊರತು, ಅಂತಹ ಮುಖ್ಯ ವಿಚಾರಗಳು ನಕಲಿಯಾಗುತ್ತವೆ. 'ಮನುಕುಲದ ಸಾರ್ವತ್ರಿಕ ಭ್ರಾತೃತ್ವಕ್ಕೆ ಸಂಬಂಧಿಸಿದ ವಿಶ್ವಸಂಸ್ಥೆಯ (ಯುಎನ್) ಘೋಷಣೆಗಳಲ್ಲಿ ಹರಡುವ ಅಪರೂಪದ, ಆದರ್ಶವಾದಿ ಅಮೂರ್ತತೆಗಳು ಹೆಚ್ಚು ಅವಾಸ್ತವಿಕವಾಗಿವೆ ಮತ್ತು ಭೇದಿಸುವ ವಾಸ್ತವಗಳು ಧ್ವನಿಯನ್ನು ಕಂಡುಕೊಳ್ಳುವುದನ್ನು ನಾವು ಖಚಿತಪಡಿಸಿಕೊಳ್ಳಬೇಕು' (ಸೆರ್ಪೆಲ್, 1993, ಪು. xi). ಆತಿಥೇಯ ಸಮುದಾಯದ ಸಾಂಸ್ಕೃತಿಕ ಅರ್ಥ ವ್ಯವಸ್ಥೆಗಳ ನಡುವೆ ಭಿನ್ನಾಭಿಪ್ರಾಯ ಉಂಟಾದಾಗ, ಆರ್ಥಿಕ ಕಾರ್ಯಸೂಚಿಯು ಮೇಲುಗೈ ಸಾಧಿಸಿ, ಮಗುವಿನ ಕುಟುಂಬ, ಮನೆ ಮತ್ತು ಸಮುದಾಯಗಳ ವ್ಯವಸ್ಥಿತ ಅಪಮೌಲ್ಯೀಕರಣವಾಗುತ್ತದೆ. ಈಗಿರುವಂತೆ, ಭಾರತದ ಶಾಲೆಗಳು ತಮ್ಮಿಂದ ಪ್ರಯೋಜನ ಪಡೆಯಬಹುದಾಗಿದ್ದ ಬಹಳಷ್ಟು ಮಕ್ಕಳಿಗೆ ನಿರಾಶೆಯುಂಟು ಮಾಡಿವೆ. ಶಾಲೆಗಳು ವ್ಯವಸ್ಥಿತವಾಗಿ ಮಕ್ಕಳನ್ನು 'ಸುಧಾರಿಸುವ' ಹೆಸರಿನಲ್ಲಿ ದೈಹಿಕ ಶಿಕ್ಷೆಯನ್ನು ಮುಂದುವರೆಸುತ್ತಿವೆ ಮತ್ತು ಯಾವುದೇ ಪ್ರಾಯೋಗಿಕ ಅನುಭವವಿಲ್ಲದ ಬೋಧನೆಯು ರೂಢಿಯಾಗಿದೆ. ಬಡೇಕಾ (1990) ಅವರು '*ದಿವಾಸ್ವಪ್ನ*' ದಲ್ಲಿ ಕಂಡಿದ್ದ ತರಗತಿಯ ಪ್ರಕಾರಕ್ಕೆ ಬಹಳ ಕಡಿಮೆ ಅವಕಾಶವಿದೆ. ಬೆರಳೆಣಿಕೆಯಷ್ಟು ನವೀನ ಕಾರ್ಯಕ್ರಮಗಳನ್ನು ಹೊರತುಪಡಿಸಿ, ಶಾಲೆಗಳು ಮತ್ತು ಶಿಶುವಿಹಾರಗಳು ಶಿಸ್ತುಬದ್ಧ, ಔಪಚಾರಿಕ ವ್ಯವಸ್ಥೆಯ ಸ್ವರೂಪವನ್ನು ಅನುಸರಿಸುತ್ತವೆ. ಅಲ್ಲಿ ಶಿಕ್ಷಕರು ಮಾತನಾಡುತ್ತಾರೆ ಮತ್ತು ಮಕ್ಕಳು ಬರೆಯುತ್ತಾರೆ. ಯಾವುದೇ ರೀತಿಯ ಚರ್ಚೆಗೆ ಬಹಳ ಕಡಿಮೆ ಅವಕಾಶವಿದ್ದು, ಪ್ರಾಯೋಗಿಕ ಪ್ರದರ್ಶನಕ್ಕೆ ಅವಕಾಶಗಳು ಇನ್ನೂ ಕಡಿಮೆ.

ಪ್ರಪಂಚದಾದ್ಯಂತ ಔಪಚಾರಿಕ ಶಾಲಾ ಶಿಕ್ಷಣವು ಸಾಮಾಜಿಕ ನಿಯಂತ್ರಣದ ಬಗ್ಗೆ ಅದರಲ್ಲೂ ಹೇಗೆ ಯೋಚಿಸಬೇಕು ಎಂಬುದನ್ನು ನಿಯಂತ್ರಿಸುವ ಸಾಧನವಾಗಿ ಮಾರ್ಪಟ್ಟಿದೆ (ವಾಲ್ಸಿನರ್, 2003). ಇದು ಟ್ಯಾಗೋರ್ ಅವರು ಶಿಕ್ಷಣದ ಗುರಿ ಮನಸ್ಸನ್ನು ಮುಕ್ತಗೊಳಿಸುವುದು ಎನ್ನುವುದಕ್ಕೆ ಸಂಪೂರ್ಣವಾಗಿ ವಿರುದ್ಧವಾಗಿದೆ. ಪ್ರಗತಿಯ ಹೆಸರಿನಲ್ಲಿ ವ್ಯಕ್ತಿಗಳ ಹಾಗೂ ಸಾಮೂಹಿಕ ಸಾಂಸ್ಕೃತಿಕ ಜೀವನಗಳು ಬಲಿಯಾಗುತ್ತಿವೆ, ಮತ್ತು ವಾಸ್ತವವಾಗಿ, ಶಾಲೆಗಳು ಯಾರಿಗೆ ಶಾಲೆ

ಅತಿ ಹೆಚ್ಚು ನಿರ್ಣಾಯಕವೋ ಅಂತಹವರನ್ನು ವಿಫಲಗೊಳಿಸುತ್ತವೆ ಮತ್ತು ಯಶಸ್ವಿಯಾದವರಲ್ಲಿ ಹೆಚ್ಚಿನವರು ತಮ್ಮ ಮನೆಗಳು, ಕುಟುಂಬಗಳು ಮತ್ತು ಸಮುದಾಯಗಳಿಂದ ದೂರವಾಗುತ್ತಾರೆ. ಶಾಲಾ ಶಿಕ್ಷಣವು ಯಶಸ್ವಿಯಾಗಬೇಕಾದರೆ ಸ್ಥಳೀಯ ಸಂಸ್ಕೃತಿಗೆ ಉತ್ತಮವಾಗಿ ಹೊಂದಿಕೊಳ್ಳಬೇಕು. ಶಿಕ್ಷಣದಲ್ಲಿ ಹಲವಾರು ಸರ್ಕಾರೇತರ ನವೀನ ಪ್ರಯೋಗಗಳು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿವೆ (Centre For Early Childhood Education and Development, 2003) ಮತ್ತು ಮಕ್ಕಳಿಗೆ ಶಾಲಾ ಶಿಕ್ಷಣವನ್ನು ಆನಂದಿಸಲು ಹಾಗೂ ತಮ್ಮ ಆತ್ಮಸಮ್ಮಾನವನ್ನು ಅಖಂಡವಾಗಿರಿಸಿಕೊಂಡು ಕಲಿಯಲು ಸಿದ್ಧರಾಗಿ ಶಾಲೆಗೆ ಬರುವುದನ್ನು ಖಚಿತಪಡಿಸಿಕೊಳ್ಳಲು ಮಾದರಿಗಳಾಗಿ ಬಳಸಬೇಕಾಗಿದೆ.

ಆಶ್ಚರ್ಯಕರ ಸಂಗತಿಯೆಂದರೆ, ಅತಿಯಾಗಿ ಶಾಲಾ ವ್ಯವಸ್ಥೆಯನ್ನು ನಿರಾಕರಿಸಲಾಗುತ್ತಿದೆ ಎನ್ನುವುದಲ್ಲ, ಇನ್ನೂ ನೂರಾರು ಸಾವಿರ ಮಕ್ಕಳು ಮತ್ತು ಅವರ ಕುಟುಂಬಗಳು ಶಾಲಾ ವ್ಯವಸ್ಥೆಯನ್ನು ನಂಬಿ ಉತ್ಸಾಹದಿಂದ ಪ್ರತಿದಿನ ಶಾಲೆಗೆ ಹೋಗುತ್ತಿರುವುದು (ಎಸ್. ಆನಂದಲಕ್ಷ್ಮಿ, ಪರ್ಸನಲ್ ಕಮ್ಯೂನಿಕೇಶನ್, 20 ನವೆಂಬರ್ 2015). ಮಕ್ಕಳು ಕಲಿಯಲು ಕುತೂಹಲ, ತವಕ ಹೊಂದಿರುತ್ತಾರೆ ಮತ್ತು ಅವರಿಗೆ ಅವಕಾಶ ನೀಡಿದಲ್ಲಿ ಮಾಹಿತಿಯನ್ನು ಹೊಂದುವ ಮಾರ್ಗಗಳನ್ನು ಕಂಡುಕೊಳ್ಳುತ್ತಾರೆ ಎಂದು ಮಿತ್ರಾ ವಾದಿಸುತ್ತಾರೆ (Hole in the Wall Education Limited, 2015). ಕಡಿಮೆ ಅತಿಕ್ರಮಣಕಾರಿಯಾದ ಕಲಿಕೆಯ ಈ ಹೊಸ ರೂಪವು ಪರ್ಯಾಯವಾಗಿದ್ದು, ಪ್ರಾಯೋಗಿಕ ಯೋಜನೆಯಾಗಿ ಪ್ರಾರಂಭವಾದ ಕಡೆಗಳಲ್ಲಿ ಅತ್ಯಂತ ಯಶಸ್ವಿಯಾಗಿದೆ ಎಂದು ಸಾಬೀತಾಗಿದ್ದು, ಸಾರ್ವಜನಿಕರಿಗೆ ಇಂತಹ ಕಲಿಕಾ ಕೇಂದ್ರಗಳನ್ನು ಸ್ಥಾಪಿಸಲು ಬೆಂಬಲದ ಅಗತ್ಯವಿದೆ. ನಮ್ಮ ಅನೇಕ ವಿದ್ವಾಂಸರು (ಟ್ಯಾಗೋರ್, ಕೃಷ್ಣಮೂರ್ತಿ, ಶ್ರೀ ಅರಬಿಂದೋ) ನಂಬಿದಂತೆ ಶಿಕ್ಷಣವು ಮನಸ್ಸನ್ನು ಮುಕ್ತಗೊಳಿಸಲು ಎಂದು ನಂಬಿದ್ದರೆ, ಅದಕ್ಕೆ ಸಂಪೂರ್ಣ ವಿರುದ್ಧವಾದುದನ್ನು ಬಹುಪಾಲು ಮಕ್ಕಳಿಗೆ ನಮ್ಮ ಶಿಕ್ಷಣ ವ್ಯವಸ್ಥೆಯು ತುಂಬುತ್ತಿದೆ. ನಮಗೆ ಎಲ್ಲಾ ವಯಸ್ಸಿನ ವಿದ್ಯಾರ್ಥಿಗಳಿಗೆ ವಿವಿಧ ರೀತಿಯ ಅವಕಾಶಗಳನ್ನು ನೀಡುವ ವಿವಿಧ ರೀತಿಯ ಕಲಿಕಾಕೇಂದ್ರಗಳು, ಪ್ರಾಯೋಗಿಕ ಕಲಿಕಾ ಕೇಂದ್ರಗಳು ಬೇಕು. ನಮಗೆ ತಿಳಿದಿರುವಂತೆ ಶಾಲೆಗಳು ಒಂದೇ ಆಯ್ಕೆಯಲ್ಲ. ಕಲಿಕೆಗೆ ಅವಕಾಶಗಳನ್ನು ಒದಗಿಸಲು ಅತ್ಯಂತ ವೈವಿಧ್ಯಮಯ ವಿಧಾನಗಳನ್ನು ಬಳಸುವುದೊಂದೇ ಇದಕ್ಕೆ ಉತ್ತರವಾಗಿದೆ. ನಾವು ಹೆಚ್ಚು ಹೆಚ್ಚು ಮಕ್ಕಳಿಗೆ ಕಲಿಸುವ ಪ್ರಯತ್ನ ಮಾಡುತ್ತಿರುವಾಗ ಮಗುವೊಂದರ ವೈಯಕ್ತಿಕ ಸಕ್ರಿಯ ಕಲಿಕೆಯ ಅಗತ್ಯವನ್ನು ಗಮನಿಸದೆ ಹೋಗುವ ಸಾಧ್ಯತೆ ಹೆಚ್ಚಾಗುತ್ತದೆ. ಮಕ್ಕಳು ಶಾಲೆಗೆ ಪ್ರವೇಶಿಸುವ ಮೊದಲು ಕಲಿಕೆಯ ಸಂಪತ್ತಿನೊಂದಿಗೆ ಶಾಲೆಗೆ ಬರುತ್ತಾರೆ. ಆದರೆ, ಮುಖ್ಯವಾಗಿ ಶಿಕ್ಷಕರು, ಮಕ್ಕಳು ಕಡಿಮೆ ಅಥವಾ ಯಾವುದೇ ಜ್ಞಾನವಿಲ್ಲದೆ ಪ್ರವೇಶಿಸುತ್ತಾರೆ ಮತ್ತು ಈಗ ಅವರು ತಿಳಿದುಕೊಂಡಿರುವುದು ತಪ್ಪಾಗಿದ್ದು ಅದನ್ನು ಶಾಲೆ ಸರಿಪಡಿಸಬೇಕು ಎಂದು ನಂಬುತ್ತಾರೆ (ಕಲ್ರಾ, 2002).

ಭಾಗಶಃ ಮತ್ತು ಸೂಕ್ತವಲ್ಲದ ಶಾಲಾ ಶಿಕ್ಷಣದ ಒಂದು ಫಲಿತಾಂಶವೇನೆಂದರೆ, ಅನೇಕ ಯುವ ವಿದ್ಯಾವಂತ ನಿರುದ್ಯೋಗಿಗಳು ಅಪೂರ್ಣ ಶಿಕ್ಷಣದಿಂದಾಗಿ ತಮ್ಮ ಕುಟುಂಬದ ಉದ್ಯೋಗದಿಂದ ಹೊರಬಿದ್ದಿರುವುದು ಮತ್ತು ಅವರನ್ನು ಸ್ವೀಕರಿಸುವ ಅವಕಾಶಗಳನ್ನು ಇನ್ನೂ ಕಂಡುಕೊಳ್ಳದೇ ಇರುವುದು. ಇದರ ಫಲಿತಾಂಶ, ಒಂದು ಯುವ ತಲೆಮಾರು

ತಮಗೆ ಇರುವುದನ್ನು ಒಪ್ಪಿಕೊಳ್ಳುವುದಿಲ್ಲ ಮತ್ತು ಅವರು ಯಾವ ಕೆಲಸ ಮಾಡಲು ಬಯಸುತ್ತಾರೋ ಅಲ್ಲಿ ಸ್ವೀಕರಿಸಲ್ಪಡುವುದಿಲ್ಲ. ಕೆಲಸವಿಲ್ಲದ ಯುವಕರು ಬಾಲಾಪರಾಧ ಮತ್ತು ದುಷ್ಕೃತ್ಯಗಳಿಗೆ ತೊಡಗುವ ಸಂಭವವಿದ್ದು ಆಡಳಿತಕ್ಕೆ ಸಮಸ್ಯೆಯಾಗುತ್ತಾರೆ. ಪ್ರಶಿಕ್ಷಣಾರ್ಥಿ ಮಾದರಿಯ ಚಾಲ್ತಿಯಲ್ಲಿದ್ದ ಸಾಂಪ್ರದಾಯಿಕ ಉದ್ಯೋಗಗಳ ರಕ್ಷಣಾತ್ಮಕ ಗುಣವು, ಯುವಕರನ್ನು ಹಿರಿಯರ ಸಹವಾಸದಲ್ಲಿ ಇರಿಸಿ ಸಮವಯಸ್ಕರೊಡನೆ ಸೇರಿ ನಡೆಸುವ ಬಹಳಷ್ಟು ಅಪರಾಧಗಳನ್ನು ತಡೆಯುತ್ತಿತ್ತು.

ಸಮುದಾಯಗಳು ವಾಸಿಸುವ ಪ್ರಾಯೋಗಿಕ ಸನ್ನಿವೇಶದಲ್ಲಿ ಕೆಲಸ ಮಾಡಲು ಶಾಲೆಗಳು ಹೊಂದಿಕೊಳ್ಳಬೇಕು ಎನ್ನುವುದಕ್ಕೆ ಇದು ಒಂದು ಕಾರಣ. ಸ್ಥಳೀಯ ಜ್ಞಾನವನ್ನು ಸಂಯೋಜಿಸದ ಹೊರತು, ಜನರು ಮತ್ತು ಅವರ ಸಮುದಾಯದ ನಡುವಿನ ಸ್ಥಳಾಂತರವು ಬೆಳೆಯುತ್ತಲೇ ಇರುತ್ತದೆ ಮತ್ತು ಯುವಕರು ಎಲ್ಲಿಯೂ ಹೋಗಲೂ ಸಾಧ್ಯವಾಗದೆ, ಎಲ್ಲಿಯೂ ಉಳಿಯಲೂ ಸಾಧ್ಯವಾಗದೆ ತಮ್ಮ ಸ್ವಂತ ನೆಲದಲ್ಲೇ ಅಪರಿಚಿತರಾಗುತ್ತಾರೆ. ಪ್ರಶಿಕ್ಷಣಾರ್ಥಿ ತರಬೇತಿ ಮತ್ತು ಬಹು-ವಯಸ್ಕರ ಸಹಬಾಳ್ವೆಯು ಸಮುದಾಯಗಳನ್ನು ಸಂಘಟಿಸುವ ಒಂದು ಪ್ರಮುಖ ಮಾರ್ಗವಾಗಿದೆ. ಗ್ರಾಮೀಣ ಸಮಾಜಗಳ ವಿಶಿಷ್ಟವಾದ ಈ ರೂಪದ ಜೈವಿಕ ಸಂಘಟನೆಗಳು ಯುವಕರನ್ನೂ ಒಳಗೊಂಡಂತೆ ಎಲ್ಲಾ ವಯಸ್ಸಿನ ಮಕ್ಕಳ ಮೇಲ್ವಿಚಾರಣೆಯನ್ನು ವಹಿಸಿಕೊಳ್ಳುವ ಮೂಲಕ ಸಂಸ್ಕೃತಿಗಳಾದ್ಯಂತ ಬಾಲಾಪರಾಧ ಮತ್ತು ಅಪರಾಧವನ್ನು ತಡೆಗಟ್ಟುವಲ್ಲಿ ಪ್ರಮುಖ ವಿದ್ಯಮಾನವಾಗಿವೆ (ಕರ್ಸಾರೊ, 1997; ಷ್ಲೆಗೆಲ್ ಮತ್ತು ಬ್ಯಾರಿ, 1991). ಅಂತಹ ಪರಕೀಯತೆಯನ್ನು ಕಡಿಮೆ ಮಾಡಲು ಅಥವಾ ತಡೆಗಟ್ಟಲು ಶಿಕ್ಷಣವು ಸ್ಥಳೀಯ ಸಂಸ್ಕೃತಿಯೊಂದಿಗೆ ಹೆಚ್ಚು ಬೆರೆಯುವುದು ಅತ್ಯಗತ್ಯವಾಗಿದೆ.

ಅಂತಾರಾಷ್ಟ್ರೀಯ ನೆರವು ಮತ್ತು ಮಕ್ಕಳ ಹಕ್ಕುಗಳು

ನೆರವು ನೀಡುವ ಸಂಸ್ಥೆಗಳು, ಸರ್ಕಾರೇತರ ಸಂಸ್ಥೆಗಳು (ಎನ್ ಜಿ ಒ ಗಳು) ಮತ್ತು ಲೋಕೋಪಕಾರಿಗಳು ಜನರನ್ನು 'ಬದಲಾಯಿಸಲು' ಅವರ ಆರ್ಥಿಕ ಸ್ಥಿತಿಯನ್ನು ಬದಲಾಯಿಸಬೇಕು ಎಂದು ನಂಬುತ್ತಾರೆ. ವಾಸ್ತವವಾಗಿ ಅವರ ಕಾರ್ಯತಂತ್ರಗಳನ್ನು ಜನರ ಪರಿಸ್ಥಿತಿಗಳಿಗೆ ಹೊಂದಿಸುವ ಮೂಲಕ ಅವರ ಜೀವನೋಪಾಯಕ್ಕೆ ದಾರಿಮಾಡಬಹುದು. ಜನರು ಮತ್ತು ಅವರ ಆಚರಣೆಗಳ ಬಗ್ಗೆ ಹೆಚ್ಚು ಸೂಕ್ಷ್ಮವಾದ ತಿಳಿವಳಿಕೆಯನ್ನು, ಅವರನ್ನು ಇನ್ನೂ ಹೆಚ್ಚು ತೊಂದರೆಗೊಳಪಡಿಸಬಹುದಾದ ಮಧ್ಯಸ್ಥಿಕೆಗಳನ್ನು ಮಾಡುವ ಮೊದಲು ಕೈಗೊಳ್ಳಬೇಕಾಗಿದೆ, 'ಉದಾರತೆ'ಯನ್ನು ಪ್ರಕಟಿಸುವ ಮೊದಲು, ಶ್ರೀಮಂತರು ಮತ್ತು ಖ್ಯಾತಮಾನರ ಔದಾರ್ಯಕ್ಕೆ ಹಲವು ಅಂಶಗಳ ವಿರುದ್ಧ ಎಚ್ಚರಿಕೆ ನೀಡಬೇಕಾಗಿದೆ. ಅಂತಾರಾಷ್ಟ್ರೀಯ ಸಂಸ್ಥೆಗಳಲ್ಲಿರುವಂತೆ, ಲೋಕೋಪಕಾರಿ ಚಟುವಟಿಕೆಯು ಬಡವರ ಜೀವನಮಟ್ಟವನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ. ಆದಾಗ್ಯೂ, ಇದು ವಾಸ್ತವವಾಗಿ ಹಿನ್ನಡೆಗೆ ಕಾರಣವಾಗಬಹುದು ಮತ್ತು 'ಪ್ರಜಾಪ್ರಭುತ್ವ-ವಿರೋಧಿ' ಎಂದೂ ಪರಿಗಣಿಸಬಹುದಾಗಿದೆ (ರೀಫ್, 2005).

ಮಕ್ಕಳ ಹಕ್ಕುಗಳ ಸುಧಾರಣೆಯಲ್ಲಿ, ಪುನರ್ರಚನೆಯಲ್ಲಿ, ಸರ್ಪೆಲ್ ಮತ್ತು ಸಮೆನಂಗ್ (2004) ಅಸ್ತಿತ್ವದಲ್ಲಿರುವ ಮಕ್ಕಳ ಮೇಲಿನ ನೀತಿಯ ಹಲವಾರು ಅಂಶಗಳ ಬಗ್ಗೆ ವಿಶ್ಲೇಷಣೆ ನೀಡಿದ್ದಾರೆ. ಮುಂದಿನ ಶಾಲಾ ಪ್ರವೇಶಕ್ಕೆ ಸರಿದೂಗಿಸುವ

ಮಧ್ಯಸ್ಥಿಕೆಯಾಗಿದೆ ಎಂದು ಆರಂಭಿಕ ಶಿಕ್ಷಣದಿಂದಾಗುವ ಅನುಕೂಲಗಳನ್ನು ಹೇಳಿಕೊಂಡರೂ ಅದರಲ್ಲಿನ ಭಾಗವಹಿಸುವಿಕೆಯೂ ಹಲವಾರು ಸಂದರ್ಭಗಳಲ್ಲಿ ದುರ್ಬಲವಾಗಿದೆ. "ಇಂದಿನವರೆಗಿನ ಹೆಚ್ಚಿನ ಸಂಶೋಧನೆಯ ಸಿಂಧುತ್ವವು ಅತೀ ಕಡಿಮೆ ದತ್ತಾಂಶ, ಕರ್ತೃತ್ವದ ಕನಿಷ್ಠ ಶ್ರೇಣಿ ಮತ್ತು ಸಾಂಸ್ಕೃತಿಕವಾಗಿ ಪಾಶ್ಚಿಮಾತ್ಯ ಪ್ರೇಕ್ಷಕರ ಕಿರಿದಾದ ಶ್ರೇಣಿಯ ಮೇಲಿನ ಅವಲಂಬನೆಯಿಂದ ನಿರ್ಬಂಧಿಸಲ್ಪಟ್ಟಿದೆ' (ಸರ್ಪೆಲ್ ಮತ್ತು ಸಮೆನಂಗ್, 2004, ಪು. 1). ಆಫ್ರಿಕಾದಲ್ಲಿ ಪ್ರಸ್ತುತ ಆರಂಭಿಕ ಬಾಲ್ಯದ ಆರೈಕೆ ಮತ್ತು ಶೈಕ್ಷಣಿಕ (ಇಸಿಸಿಇ) ಆಚರಣೆಗಳ ಮರು-ಪರೀಕ್ಷೆಗಾಗಿ, ಮನವಿ ಮಾಡುವಾಗ ಲೇಖಕರು ಉಪ-ಸಹಾರನ್ ಆಫ್ರಿಕಾದ ಸಾಮಾಜಿಕ-ಸಾಂಸ್ಕೃತಿಕ ಸನ್ನಿವೇಶಗಳು ತಮ್ಮ ಶಿಶುಪಾಲನಾ ಜ್ಞಾನ, ನಂಬಿಕೆಗಳು ಮತ್ತು ಆಚರಣೆಗಳ ಸಾಮರ್ಥ್ಯ ಮತ್ತು ದೌರ್ಬಲ್ಯಗಳನ್ನು ಪರಿಗಣಿಸಲು ಮುಖ್ಯವಾಗಿವೆ ಎಂದು ಗಮನಿಸುತ್ತಾರೆ. 'ಆಫ್ರಿಕನ್ ಮಕ್ಕಳ, ವಿಶೇಷವಾಗಿ ಪಾಶ್ಚಿಮಾತ್ಯ ಸಾಂಸ್ಕೃತಿಕ ವಸ್ತುಗಳು ಮತ್ತು ಆಚರಣೆಗಳಿಗೆ ಸೀಮಿತ ಪ್ರವೇಶವನ್ನು ಹೊಂದಿರುವವರ, ಪಕ್ಷಪಾತವಿಲ್ಲದ ಮೌಲ್ಯಮಾಪನಕ್ಕೆ ಸಾಂಸ್ಕೃತಿಕ-ಸೂಕ್ಷ್ಮವಿಧಾನಗಳು ಅತ್ಯಗತ್ಯ'. (ಸರ್ಪೆಲ್ & ಸಮೆನಂಗ್, 2014, ಪು. 1) ಲೇಖಕರು ಇಸಿಸಿಇ ಕೇಂದ್ರಗಳು ಸ್ಥಳಿಯ ಸಂಸ್ಕೃತಿಯ ಆರ್ಥ-ವ್ಯವಸ್ಥೆ ಮತ್ತು ಅವುಗಳ ಅನುಕೂಲಕರ ಪದ್ಧತಿಗಳನ್ನು ಗೌರವಿಸುವ ಮೂಲಕ ಅವುಗಳ ಶಕ್ತಿಯನ್ನು ವೃದ್ಧಿಸಬೇಕು ಎಂದು ಶಿಫಾರಸು ಮಾಡುತ್ತಾರೆ. ಉಪ-ಸಹಾರನ್ ಆಫ್ರಿಕಾದಲ್ಲಿ ವಾಸಿಸುವ ಮಕ್ಕಳು ಮತ್ತು ಕುಟುಂಬಗಳಿಗೆ ಸಂಬಂಧಿಸಿದಂತೆ ಮುನ್ನೆಲೆಗೆ ತಂದ ನೀತಿ ಮತ್ತು ಆಚರಣೆಯ ಈ ಅಧ್ಯಾಯದಲ್ಲಿ ಶಿಫಾರಸ್ಸು ಮಾಡಲಾದ ಹಲವು ಅಂಶಗಳನ್ನು ಈ ಲೇಖನವು ಒಟ್ಟುಗೂಡಿಸುತ್ತದೆ. ಅವು ಇತರ ಪಾಶ್ಚಿಮಾತ್ಯೇತರ ಸನ್ನಿವೇಶಗಳಿಗೂ ಅನ್ವಯಿಸುತ್ತವೆ.

ಉಪಸಂಹಾರ

ಈ ಅಧ್ಯಾಯವು ಬಾಲ್ಯ ಮತ್ತು ಸಮಾಜವನ್ನು ನಾವು ಅರ್ಥಮಾಡಿಕೊಳ್ಳಲು ನಡೆಸಿದ ಕೆಲವು ಪ್ರಮುಖ ಆಧುನಿಕ ಪ್ರಗತಿಗಳನ್ನು ಎತ್ತಿ ತೋರಿಸುತ್ತದೆ. ವಿವಿಧ ಕ್ಷೇತ್ರಗಳಲ್ಲಿನ ವಿದ್ವಾಂಸರ ಸಮೂಹವು ಮಕ್ಕಳ ಜನನ ಮತ್ತು ಇಡೀ ಜೀವಮಾನದುದ್ದಕ್ಕೂ ನಡೆಯುವ ವಿಕಾಸದ ಹಂತಗಳ ತಿಳಿವಳಿಕೆಯನ್ನು ರೂಪಿಸಲು ಸಹಾಯ ಮಾಡಿದೆ.

ಪ್ರಾಥಮಿಕ ಆರೋಗ್ಯ ರಕ್ಷಣೆ ಮತ್ತು ವೈದ್ಯಕೀಯ ಬೆಂಬಲ ಕ್ಷೇತ್ರದಲ್ಲಿನ ಪ್ರಗತಿಯು ಅಭಿವೃದ್ಧಿ ಹೊಂದಿದ ದೇಶಗಳಲ್ಲಿನ ಪೋಷಕರಿಗೆ ಅವರ ಮಕ್ಕಳು ವೃದ್ಧಾಪ್ಯದವರೆಗೂ ಬದುಕುವ ಸಾಧ್ಯತೆಯಿದೆ ಎಂಬ ಭರವಸೆ ನೀಡಿವೆ. ಮಕ್ಕಳಿಗೆ ಸಂಬಂಧಿಸಿದ ನೀತಿಯು ಕುಟುಂಬಗಳಿಗೆ ಅವರ ಮಕ್ಕಳು ಬದುಕಲು ಮತ್ತು ಕುಟುಂಬದ ಪೋಷಣೆಗಾಗಿ ಕೆಲಸ ಮಾಡುವ ಅಗತ್ಯವಿಲ್ಲ ಮತ್ತು ಮಕ್ಕಳನ್ನು ನೋಡಿಕೊಳ್ಳಲು ಪೋಷಕರಿಗೆ ಸಾಧ್ಯವಾಗದಿದ್ದಲ್ಲಿ ಸರ್ಕಾರವು ಬೆಂಬಲವನ್ನು ಒದಗಿಸುತ್ತದೆ ಎಂದು ಭರವಸೆಯನ್ನು ನೀಡಿದೆ. ಜನಸಂಖ್ಯೆಗೆ ಸಂಬಂಧಿಸಿದಂತೆ ಜನಸಂಖ್ಯಾ ಹೆಚ್ಚಳದಲ್ಲಿ ಗಂಭೀರ ಬದಲಾವಣೆಗಳು ಸಂಭವಿಸಿದ್ದು, ಅಲ್ಲಿ ಫಲವತ್ತತೆಯ ಪ್ರಮಾಣ ಮತ್ತು ಶೈಕ್ಷಣಿಕ ಅಂತಸ್ತು ಮತ್ತಷ್ಟು ರೂಪಾಂತರಗಳನ್ನು ತರುವ ಪ್ರಮುಖ ಅಂಶಗಳಾಗಿವೆ.

ಭಾರತದ ಮಕ್ಕಳ ಆಖ್ಯಾನವು ಪ್ರಧಾನವಾಗಿ ಅನನುಕೂಲತೆಯದ್ದಾಗಿದೆ, ಮತ್ತು ಬಹುತೇಕ ಮಕ್ಕಳು ಹೆಚ್ಚುಕಡಿಮೆ ಬಡತನದ ಪರಿಸ್ಥಿತಿಯಲ್ಲಿ ಬದುಕುವುದನ್ನು ಮುಂದುವರೆಸುತ್ತಿದ್ದಾರೆ. ಬಾಲ್ಯದ ಸಮಸ್ಯೆಗಳೊಂದಿಗೆ ಕಾರ್ಯ

ನಿರ್ವಹಿಸುವಾಗ, ಆರೈಕೆಯ ಆಚರಣೆಗಳು ಪರಿಸರಕ್ಕೆ ಹೊಂದಿಕೊಂಡಿರುತ್ತವೆ ಮತ್ತು ಮಧ್ಯಪ್ರವೇಶಿಸುವ ಪ್ರಯತ್ನಗಳು ಜನರನ್ನು ಅವರಿರುವ ಸನ್ನಿವೇಶಗಳಿಗೆ ಪರಕೀಯ ಮಾಡಬಾರದು ಎಂಬ ಗಂಭೀರ ಅರಿವು ನಮಗಿರಬೇಕು. ಬೆಳೆಯುತ್ತಿರುವ ಮಕ್ಕಳಿಗೆ ಎಲ್ಲಾ ಸಂದರ್ಭಗಳಲ್ಲಿ ರಕ್ಷಣಾತ್ಮಕ ಅಂಶಗಳನ್ನು ಒದಗಿಸುವ ಅನೇಕ ನಂಬಿಕೆಗಳು, ವರ್ತನೆಗಳು ಮತ್ತು ಮೌಲ್ಯಗಳು ಇವೆ ಮತ್ತು ಕುಟುಂಬಗಳೊಂದಿಗೆ ಕೆಲಸ ಮಾಡುವಾಗ ಇವುಗಳನ್ನು ಗೌರವಿಸಬೇಕು. ದುರದೃಷ್ಟವಶಾತ್, ನಾವು ಸಾಮಾನ್ಯವಾಗಿ ಜನರ ಜೀವನದಲ್ಲಿ ಅವರಿಗೆ ರಕ್ಷಣೆ ಒದಗಿಸುವ ಗುಣಗಳನ್ನೇ ಗುರಿಯಾಗಿಸುತ್ತೇವೆ. ಬಾಲ್ಯದಲ್ಲಿನ ವ್ಯತ್ಯಾಸವು ಧನಾತ್ಮಕ ಹಾಗೂ ಸಮಾಯೋಜಕವಾಗಿರುವುದರಿಂದ ಮಕ್ಕಳು ಮತ್ತು ಕುಟುಂಬಗಳಿಗೆ ಸಂಬಂಧಿಸಿದ ಕಾರ್ಯತಂತ್ರಗಳ ಹಿಂದೆ ರಕ್ಷಣಾತ್ಮಕ ಅಂಶಗಳೆಂದು ಸಾಬೀತಾಗಿರುವ ಆಯ್ದ ಜನಾಂಗೀಯ ಆಚರಣೆಗಳ ಬಗ್ಗೆ ತಿಳಿದಿರಬೇಕು ಮತ್ತು ಬೆಂಬಲಿಸಬೇಕು. ಇದಕ್ಕಾಗಿ, ವಿಜ್ಞಾನ ಮತ್ತು ಬಾಲ್ಯದ ಆಚರಣೆಯ ನಡುವೆ ನಿಕಟ ಸಹಯೋಗದ ಅಗತ್ಯವಿದೆ. ಇದನ್ನು ಸಾಂಪ್ರದಾಯಿಕ ಜೀವನ ವಿಧಾನಗಳನ್ನು ಕಾಪಾಡಿಕೊಳ್ಳುವ ಕೂಗು ಎಂದು ನೋಡಬಾರದು. ಆದರೆ ಇದು ಮಕ್ಕಳನ್ನು ಅರ್ಥಮಾಡಿಕೊಳ್ಳುವ ಮತ್ತು ಯೋಜಿಸುವಾಗ ಅಸ್ತಿತ್ವದಲ್ಲಿರುವ ನಂಬಿಕೆಗಳು ಮತ್ತು ಆಚರಣೆಗಳನ್ನು ಅಂಗೀಕರಿಸುವ ಮನವೊಲಿಕೆಯಾಗಿದೆ.

ಅಂತಿಮವಾಗಿ, ದ್ವಂದ್ವ, ದ್ವಂದ್ವಾರ್ಥತೆ, ಬಹುತ್ವ ಮತ್ತು ವೈವಿಧ್ಯತೆಯ ಮೂಲಭೂತ ಸಹಿಷ್ಣುತೆಯು ನಮ್ಮ ಜನರನ್ನು ಒಂದುಗೂಡಿಸುವ ಒಂದು ಎಳೆಯಾಗಿದೆ. ಮಕ್ಕಳ ಆರೈಕೆಯು ಸನ್ನಿವೇಶಕ್ಕೆ ತಕ್ಕಂತೆ ಹೊಂದಿಕೊಳ್ಳುತ್ತದೆ. ಆದ್ದರಿಂದ, ಯಾವುದೇ ಮಧ್ಯಸ್ಥಿಕೆಯನ್ನು ಸ್ಥಳೀಯ ಸಂಶೋಧನೆಯ ಬೆಂಬಲದೊಂದಿಗೆ ನಿಕಟ ಸಂವಹನದಲ್ಲಿ ಪಾಲ್ಗೊಳ್ಳುವವರನ್ನು ಇರಿಸಿಕೊಳ್ಳುವ ಮೂಲಕ ಸಣ್ಣ ಹೆಜ್ಜೆಗಳೊಂದಿಗೆ ಪ್ರಾರಂಭಿಸಬೇಕು, ಮಕ್ಕಳನ್ನು ಸ್ವೀಕರಿಸುವಾಗ ಮತ್ತು ಅವರಿಗೆ ಉತ್ತಮ ಜೀವನವನ್ನು ಒದಗಿಸುವಾಗ, ಮಕ್ಕಳು ಮತ್ತು ಅವರ ಕುಟುಂಬಗಳನ್ನು ಚೆನ್ನಾಗಿ ಅರ್ಥಮಾಡಿಕೊಳ್ಳುವುದನ್ನು ನಾವು ಖಚಿತಪಡಿಸಿಕೊಳ್ಳಬೇಕು. ನಮ್ಮ ಉಪಯೋಗ ಕಳೆದುಕೊಂಡ ಅಭ್ಯಾಸಗಳನ್ನೇ ಮುಂದುವರಿಸದೆ, ಮೌಲ್ಯಯುತವಾದದ್ದನ್ನು ಉಳಿಸಿಕೊಳ್ಳಲು ಬಾಲ್ಯದ ಯೋಜನೆಗಳನ್ನು ನಿಯತಕಾಲಿಕವಾಗಿ ಮರುಪರಿಶೀಲಿಸಬೇಕು. ಅಂತಹ ಕಾರ್ಯಕ್ಕಾಗಿ, ಸರ್ಪೆಲ್ ಮತ್ತು ಸಮೆನಂಗ್(2014, ಪು. 26)ರ ಇಸಿಸಿಇ ಕಾರ್ಯತಂತ್ರ ಲೇಖನವು ಸ್ಫೂರ್ತಿ ಮತ್ತು ಬೆಂಬಲವನ್ನು ನೀಡುತ್ತದೆ. ಇಸಿಸಿಇ ಆಚರಣೆ, ಸ್ಥಳೀಯ ಸಂಪನ್ಮೂಲಗಳ ಬಳಕೆಯೊಂದಿಗೆ ಪಾಶ್ಚಿಮಾತ್ಯ ಪ್ರಾಬಲ್ಯಕ್ಕೆ ಸವಾಲು ಹಾಕುವ ಸಲುವಾಗಿ ಸಾಂಸ್ಕೃತಿಕ ವೈವಿಧ್ಯತೆಯ ವ್ಯವಸ್ಥಿತ ಅಧ್ಯಯನವು ಅತ್ಯಗತ್ಯ ಎಂದು ಲೇಖಕರು ಹಲವಾರು ಪ್ರಮುಖ ಶಿಫಾರಸುಗಳೊಂದಿಗೆ ಕೊನೆಗೊಳಿಸುತ್ತಾರೆ. ಸ್ಥಳೀಯ ಸಾಂಸ್ಕೃತಿಕ ಸ್ಥಿತಿಗತಿಗಳು ಮತ್ತು ಬೇಡಿಕೆಗಳು ಉನ್ನತ ಶಿಕ್ಷಣದಲ್ಲಿಯೂ ಸಹ ಸೇವೆಗಳನ್ನು ಒದಗಿಸುವಲ್ಲಿ ಕೇಂದ್ರ ಸ್ಥಾನವನ್ನು ಕಂಡುಕೊಳ್ಳಬೇಕು ಮತ್ತು ಸೇವಾ ಪೂರೈಕೆದಾರರು ಸಾಂಸ್ಕೃತಿಕ ಪ್ರಸ್ತುತತೆಯನ್ನು ಖಚಿತಪಡಿಸಿಕೊಳ್ಳಬೇಕು.

***

ಸ್ವೀಕೃತಿಗಳು

ಈ ಅಧ್ಯಾಯದಲ್ಲಿ ಉಲ್ಲೇಖಿಸಲಾದ ಸಂಶೋಧನೆಗೆ ಧನಸಹಾಯವನ್ನು ಎರಡು ಮೂಲಗಳಿಂದ ಸ್ವೀಕರಿಸಲಾಗಿದೆ: ಐಸಿಎಸ್‌ಎಸ್‌ಆರ್‌ನ ಹಿರಿಯ ಫೆಲೋಶಿಪ್ ಅನುದಾನ ಮತ್ತು ಯುಜಿಸಿಯ ಪ್ರಮುಖ ಸಂಶೋಧನಾ ಅನುದಾನ. ಯಾವುದೇ ಸಂಸ್ಥೆ ಅಥವಾ ಸಿದ್ಧಾಂತದ ಬಗ್ಗೆ ಭಯ ಅಥವಾ ಒಲವು ಇಲ್ಲದೆ ಸಂಶೋಧನೆ ನಡೆಸಲು ನನಗೆ ಅವಕಾಶ ನೀಡಿದ್ದಕ್ಕಾಗಿ ನಾನು ಈ ಸಂಸ್ಥೆಗಳಿಗೆ ಕೃತಜ್ಞತೆ ಸಲ್ಲಿಸಲು ಬಯಸುತ್ತೇನೆ. ಈ ಅಧ್ಯಾಯದ ಅಂತಿಮ ಕರಡು ಪ್ರತಿಯನ್ನು ತಿದ್ದಲು ಸಹಕರಿಸಿದ ಭಾವನಾ ನೇಗಿ ಅವರ ಸಹಾಯಕ್ಕಾಗಿ ಅವರಿಗೆ ಧನ್ಯವಾದ ಹೇಳುತ್ತೇನೆ. ಈ ಅಧ್ಯಾಯದಲ್ಲಿ ನಾನು ಗಮನಿಸದೆ ಬಿಟ್ಟಿದ್ದ ವಿಚಾರಗಳನ್ನು ಎತ್ತಿ ತೋರಿಸಿದ ಅನಾಮಧೇಯ ವಿಮರ್ಶಕರಿಗೆ ನನ್ನ ಕೃತಜ್ಞತೆಯನ್ನು ಸಲ್ಲಿಸುತ್ತೇನೆ ಮತ್ತು ಅವುಗಳನ್ನು ಪರಿಹರಿಸಲು ಪ್ರಯತ್ನಿಸಿದ್ದೇನೆ.

ಪರಾಮರ್ಶನಗಳು

Badeka, G. (1990). Divaswapna (A. Gupta, Trans.). Retrieved from www. teachersofindia.org/en/ebook/divaswapna-gijubhai-badheka.

Balmes, T. (Director). (2010). Babies: A documentary. Paris, France: Studio Canal.

Bartlett, F. C. (1932). Remembering. Cambridge, UK: Cambridge University Press.

Behera, D. (2007). Introduction. In D. Behera (Ed.), Childhoods in South Asia (pp. 227-237). New Delhi, India: Dorling Kindersley.

Bernstein, N. (2009, July 24). Difficult adjustment: Chinese-American children sent to live with kin abroad face tough return. The New York Times, pp. A15, A17.

Boo, K. (2014). Behind the beautiful forevers: Life, death and hope in a Mumbai undercity. New York, NY: Random House.

Centre for Early Childhood Education and Development. (2013). Quality and diversity in early childhood education. Centre for Early Childhood Care and Education. New Delhi, India: Ambedkar University. Retrieved from http://ceced.net/CECED-Report.pdf

Chaudhary, N. (2004). Listening to culture: Constructing reality through everyday talk. New Delhi, India: Sage.

Chaudhary, N. (2013). Parent beliefs, socialisation practices and children's development in Indian families (Major research project, Unpublished report). New Delhi, India: The University Grants Commission.

Chaudhary, N. (2015). Self and identity of the young child: Emerging trends in contemporary Indian families (Senior fellowship projects, Unpublished report). New Delhi, India: The Indian Council for Social Science Research.

Chen, X., Cen, G., Li, D., & He, Y. (2005). Social functioning and adjustment in Chinese children: The imprint of historical time. Child Development, 76(1), 182-195.

Cole, M. (2002), Culture and development. In H. Keller, Y. H. Poortinga, & A. Schölmerich (Eds.), Between culture and biology: Perspectives on ontogenetic development (pp. 303-319). Cambridge, UK: Cambridge University Press.

Corsaro, W. A. (1997). The sociology of childhood. Thousand Oaks, CA: Pine Forge Press.

Guru, G. (Ed.). (2009). Humiliation: Claims and context. New Delhi, India: Oxford University Press.

Hole in the Wall Education Limited. (2015). Hole in the Wall: Lighting the spark of learning. Retrieved from http://www.hole-in-the-wall.com/Beginnings.html

Kakar, S., & Kakar, K. (2007). The Indians: Portrait of a people. New Delhi, India: Penguin.

Kalra, M. B. (2012). Teachers' personal theories of knowledge, learning and learners: Implications for teacher education programmes (Unpublished doctoral dissertation). New Delhi, India: Faculty of Education, University of Delhi.

Keller, H. (2013). Infancy and well-being. In A. Ben-Arieh, F. Casas, I. Frones, & J. E. Korbin (Eds.), Handbook of child well-being (pp. 1605-1627). Dordrecht, The Netherlands: Springer.

Kumar, M. (2006). Rethinking psychology in India: Debating past and futures. Annual Review of Critical Psychology, 5, 236-256.

Kumar, A., Tewari, D., & Tewari, J. P. (2006). Ethnomedicinal knowledge among Tharu tribe of Devipatan division. Indian Journal of Traditional Knowledge, S(3), 310-313.

Kurtz, S. M. (1992). All the mothers are one: Hindu India and the cultural reshaping of Psychoanalysis. Newyork, NY: Columbia University Press.

Lancy, D. F. (2008). The anthropology of childhood. Cherubs, chattel, change-lings. New York, NY: Cambridge University Press.

Lancy, D. F. (2016). Playing with knives: The socialization of self-initiated learners. Child Development, 87(3), 654-665.

Lythcott-Haims, J. (2015). Kids of helicopter parents are sputtering out. Retrieved from http://www.slate.com/articles/double_x/doublex/2015/07/ helicopter parenting_is_increasingly correlated_with_college_age_depres- sion.html

Maffi, L., & Woodley, E. (2012). Biocultural diversity conservation. London, UK: Earthscan.

Mander, H. (2015). Looking away: Inequality, prejudice and indifference in new India. New Delhi, India; Speaking Tiger.

Mishra, A. K., Akojam, B., & Misra, G. (2009). Social psychological perspectives on self and identity. In G. Mishra (Ed.), Psychology in India: Social and organizational processes (ICSSR survey of advances in research) (Vol. 2, pp. 52-103), New Delhi, India: Pearson.

Misra, G., & Kumar, M. (2009). Psychology in India: Retrospect and prospect. In G. Misra (Ed.), Psychology in India: Theoretical and methodological developments (Vol. 4, pp. 339-376). New Delhi, India: Pearson.

Montenegro, M., & Glavin, T. (2015, October 28). In defense of difference. Seed Magazine. Retrieved from http://seedmagazine.com/content/article/ in_defense_of_difference/

Montessori, M. (1966/2013). The secret of childhood. Ney York, NY: Ballantine Books.

Mullainathan, S., & Shafir, E. (2014). Scarcity: The new science of having less and how it defines our lives. New York, NY: Times Books.

Nichter, M., & Nichter, M. (1987). A tale of Simean: Reflections on raising a child while conducting field-work in rural south India. In J. Cassel (Ed.), Children in the field: Anthropological experiences (pp. 65-89). Philadelphia, PA: Temple University Press.

Ortner, S. B. (2006). Anthropology and social theory: Culture, power, and the acting subject. Durham, NC: Duke University Press.

Purvis, K., & Kennedy, L. (2016, January 13). Volunteer travel: Experts raise concerns over unregulated industry. The Guardian. Retrieved from www. theguardian.com/global-development-professionals-network/2016/jan/13/concerns-unregulated-volunteer-tourism-industry?CMP

Rieff, D. (2015, October 1). Philanthrocapitalism: A self-love story. The Nation. Retrieved from www.thenation.com/article/philanthrocapitalism-a-self-love-story/

Rogoff, B. (2011). Developing destinies: A Mayan midwife and town. New York, NY: Oxford University Press.

Roland, A. (2005). Multiple mothering and the familial self. In S. Akhtar (Ed.), Freud along the Ganges: Psychoanalytic reflections on the people and cultures of India (pp. 79-90). New York, NY: Other Press.

Saraswathi, T. S., & Pai, S. (1997). Socialisation in the Indian context. In H. S. R. Kao & D. Sinha (Eds.), Asian perspectives on psychology (pp. 74-92). New Delhi, India: Sage.

Schlegel, A., & Barry, H. (1991). Adolescence: An anthropological enquiry. New York, NY: Free Press.

Serpell, R. (1993). The significance of schooling: Life-journeys in an African society. Cambridge: Cambridge University Press.

Serpell, R. & Nsamenang, B. (2014). Locally relevant and quality ECCE programmes: Implications of research on indigenous African child development and socialization. Early Childhood Care and Education Series, Volume 3. Paris: UNESCO.

Seymour, S. (1999). Women, family and child care in India: A world in transition. Cambridge, UK: Cambridge University Press.

Sharma, D. (2003). Introduction. In D. Sharma (Ed.), Childhood, family and socio-cultural change in India (pp. 1-12). New Delhi, India: Oxford University Press.

Sinha, D. (2002). Culture and psychology: Perspective of cross-cultural psychology. Psychology & Developing Societies, 14(1), 11-25.

Talhelm, T., Zhang, X., Oishi, S., Shimin, C., Duan, D., Lan, X., & Kitayama, S. (2014). Large-scale psychological differences within China explained by rice versus wheat agriculture. Science, 344, 603-608.

Trawick, M. (1990). Notes on love in a Tamil family. Berkeley, CA: University of California Press.

Valsiner, J. (2003). Mission in history and history through a mission: Inventing better worlds for humankind. Leiden, The Netherlands: Leiden University. Valsiner, J. (2007). Culture in minds and societies. New Delhi, India: Sage.

Weisner, T. S. (2014). The socialization of trust: Plural caregiving and diverse pathways in human development across cultures. In H. Otto & H. Keller (Eds.), Different faces of attachment (pp. 263-277). Cambridge, UK: Cambridge University Press.

Weisner, T. W., & Gallimore, R. (1977). My brother's keeper: Child and sibling caretaking. Current Anthropology, 18(2), 169-190.